بِسْمِ اللهِ الرَّحْمٰنِ الرَّحِيْمِ　نَحْمَدُهٗ وَنُصَلِّي عَلٰى رَسُوْلِهِ الْكَرِيْمِ　وَعَلٰى عَبْدِهِ الْمَسِيْحِ الْمَوْعُوْدِ

وَلَقَدْ نَصَرَكُمُ اللهُ بِبَدْرٍ وَّاَنْتُمْ اَذِلَّةٌ

ವರ್ಷ: 04

ಸಂಚಿಕೆ: 07

ಕನ್ನಡ ಬದರ್ ವಾರ ಪತ್ರಿಕೆ

WEEKLY BADAR QADIAN KANNADA

ವಾರ್ಷಿಕ ಶುಲ್ಕ ರೂ.600/-

ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.

16 ಫೆಬ್ರವರಿ 2023, 16 ತಬ್ಲೀಗ್ 1402 ಹಿಜರಿ ಶಮ್‌ಸಿ,
03 ರಜಬ್ 1444 ಹಿಜರಿ ಖಮರಿ.


## ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಅಲ್ಲಾಹನು ಹುಝೂರ್ ರವರನ್ನು ಪ್ರತಿಕ್ಷಣ ಸಂರಕ್ಷಿಸಲಿ- **ಆಮೀನ್**

اَللّٰهُمَّ اَيِّدْ اِمَامَنَا بِرُوْحِ الْقُدُسِ
وَبَارِكْ لَنَا فِيْ عُمُرِهٖ وَاَمْرِهٖ۔

## ಅಲ್ಲಾಹನ ಉಪದೇಶ

يٰٓاَيُّهَا الَّذِيْنَ اٰمَنُوْا لَا تَخُوْنُوا اللّٰهَ وَالرَّسُوْلَ وَتَخُوْنُوْٓا اَمٰنٰتِكُمْ وَاَنْتُمْ تَعْلَمُوْنَ (سورة انفال:28)

(ಅಲ್-ಅನ್‌ಫಾಲ್: 28)

ಅಂದರೆ: ಎಲೈ ಸತ್ಯವಿಶ್ವಾಸಿಗಳೇ, ನೀವು ಅಲ್ಲಾಹನಿಗೂ ಪ್ರವಾದಿಗೂ ವಿಶ್ವಾಸಘಾತ ಮಾಡಬಾರದು. ನೀವು ತಿಳಿದುಕೊಂಡೂ ನಿಮ್ಮ ವಿಶ್ವಸ್ತನಿಧಿಗಳಲ್ಲಿ ವಂಚನೆ ಮಾಡಬೇಡಿರಿ.

## ಪ್ರವಾದಿ ಮುಹಮ್ಮದ್(ಸ)ರವರ ಉಪದೇಶ

### ನಫಲಿ ಉಪವಾಸವನ್ನು ಅನುಕೂಲಕ್ಕಾಗಿ ತೆರೆಯುವುದು

**(1968)** ವಹಬ್ ಬಿನ್ ಅಬ್ದುಲ್ಲ ಸವಾಯಿ(ರ) ಅವರು ವರದಿ ಮಾಡುತ್ತಾರೆ, ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವಸಲ್ಲಮರು ಹಝ್ರತ್ ಸಲ್ಮಾನ್(ರ) ಮತ್ತು ಹಝ್ರತ್ ಅಬೂದರ್ದಾ(ರ) ಅವರನ್ನು ಸಹೋದರರನ್ನಾಗಿ ಮಾಡಿದರು. ಹಝ್ರತ್ ಸಲ್ಮಾನ್(ರ) ಹಝ್ರತ್ ಅಬು ದರ್ದಾ(ರ) ಅವರನ್ನು ಭೇಟಿಯಾಗಲು ಹೋದಾಗ, ಹಝ್ರತ್ ಉಮ್ಮೆ ದರ್ದಾ (ದರ್ದಾ(ರ) ಅವರ ತಾಯಿ) ಕೊಳಕು ಬಟ್ಟೆಗಳನ್ನು ಧರಿಸಿರುವುದನ್ನು ಕಂಡು ಕೇಳಿದರು: ನಿಮ್ಮ ಪರಿಸ್ಥಿತಿ ಯಾಕೆ ಈ ರೀತಿ ಇದೆ? ಅವರು ಹೇಳಲಾರಂಭಿಸಿದರು: ನಿಮ್ಮ ಸಹೋದರ ಅಬು ದರ್ದಾ ಅವರಿಗೆ ಪ್ರಪಂಚದ ಅಗತ್ಯತೆಗಳಿಲ್ಲ. ಅಷ್ಟರಲ್ಲಿ ಹಝ್ರತ್ ಅಬು ದರ್ದಾ(ರ) ಬಂದರು, ಅವರು ಹಝ್ರತ್ ಸಲ್ಮಾನ್(ರ) ಅವರಿಗೆ ಊಟವನ್ನು ಸಿದ್ಧಪಡಿಸಿ ಹೇಳಿದರು, "ತಿನ್ನಿರೀ" ಅದಕ್ಕೆ ಅವರು ಹೇಳಿದರು: ನಾನು ಉಪವಾಸ ಮಾಡುತ್ತಿದ್ದೇನೆ. ಹಝ್ರತ್ ಸಲ್ಮಾನ್(ರ) ಹೇಳಿದರು: ನೀವು ತಿನ್ನುವ ತನಕ ನಾನು ತಿನ್ನುವುದಿಲ್ಲ. (ವಹ್ಬ) ಹೇಳಿದರು: ಹಝ್ರತ್ ಅಬು ದರ್ದಾ(ರ) ಅವರು ಊಟ ಮಾಡಿದರು. ರಾತ್ರಿಯಾದಾಗ ಹಝ್ರತ್ ಅಬು ದರ್ದಾ(ರ) ಅವರು ಎದ್ದುನಿಂತು ನಮಾಝ್ ಅನ್ನು ನಿರ್ವಹಿಸಲು ಪ್ರಾರಂಭಿಸಿದರು. (ಹಝ್ರತ್ ಸಲ್ಮಾನ್(ರ)) ಹೇಳಿದರು: ಮಲಗಿರಿ. ಅವರು ಮಲಗಿಕೊಂಡರು. ನಂತರ ಅವರು ನಮಾಝ್‌ಗೆ ಎದ್ದೇಳಲು ಪ್ರಾರಂಭಿಸಿದಾಗ ಅವರು ಹೇಳಿದರು: ಮಲಗಿರಿ. ರಾತ್ರಿಯ ಕೊನೆಯ ಭಾಗ ಸಂಭವಿಸಿದಾಗ, ಹಝ್ರತ್ ಸಲ್ಮಾನ್(ರ) ಅವರಿಗೆ ಹೇಳಿದರು: ಈಗ ಎದ್ದೇಳಿ ಮತ್ತು ಇಬ್ಬರೂ ನಮಾಝನ್ನು ನಿರ್ವಹಿಸಿದರು ಮತ್ತು ಹಝ್ರತ್ ಸಲ್ಮಾನ್(ರ) ಅವರಿಗೆ ಹೇಳಿದರು: ನಿಮ್ಮ ಪ್ರಭು ನಿಮ್ಮ ಮೇಲೆ ಹಕ್ಕನ್ನು ಹೊಂದಿದ್ದಾನೆ ಮತ್ತು ನಿಮ್ಮ ಆತ್ಮ ಮತ್ತು ನಿಮ್ಮ ಹೆಂಡತಿಗೂ ನಿಮ್ಮ ಮೇಲೆ ಹಕ್ಕಿದೆ. ಆದ್ದರಿಂದ, ಪ್ರತಿಯೊಬ್ಬರಿಗೆ ಸರಿಯಾದ ಹಕ್ಕನ್ನು ನೀಡಿ. ಹಝ್ರತ್ ಅಬು ದರ್ದಾ(ರ) ರಸೂಲುಲ್ಲಾಹ್(ಸ) ಅವರ ಬಳಿಗೆ ಬಂದು ಇದನ್ನು ಪ್ರಸ್ತಾಪಿಸಿದರು, ಅದಕ್ಕೆ ರಸೂಲುಲ್ಲಾಹ್(ಸ) ಅವರು ಅವರಿಗೆ ಹೇಳಿದರು: ಸಲ್ಮಾನ್(ರ) ಅವರು ಸತ್ಯವನ್ನು ಹೇಳಿದ್ದಾರೆ. **(ಸಹೀಹ್ ಬುಖಾರಿ, ಸಂಪುಟ-03, ಕಿತಾಬ್ ಅಲ್-ಸೂಮ್, ಪ್ರಕಟಿತ 2008, ಖಾದಿಯಾನ್)**

**ತನ್ನ ಬುದ್ಧಿವಂತಿಕೆ ಅಥವಾ ಸಂಪತ್ತಿನ ಬಗ್ಗೆ ಹೆಮ್ಮೆಪಡುವ ವ್ಯಕ್ತಿಯು ಮೂರ್ಖನಾಗಿದಾನೆ ಏಕೆಂದರೆ ಇದೆಲ್ಲವೂ ಸರ್ವಶಕ್ತನಾದ ಅಲ್ಲಾಹನ ಕೊಡುಗೆಯಾಗಿದೆ, ಅವನು ಅದನ್ನು ಎಲ್ಲಿಂದ ತಂದಿರುವನು?**

**ಒಬ್ಬ ವ್ಯಕ್ತಿಯು ತನ್ನ ಬಲಹೀನತೆ ಮತ್ತು ದೌರ್ಬಲ್ಯದ ಬಗ್ಗೆ ಯೋಚಿಸುವುದು ಮತ್ತು ಕಲ್ಪಿಸಿಕೊಳ್ಳುವುದು ಅವಶ್ಯಕ, ಅವನು ತನ್ನ ದೌರ್ಬಲ್ಯದ ಬಗ್ಗೆ ಎಷ್ಟು ಯೋಚಿಸುತ್ತಾನೊ ಅವನು ಸರ್ವಶಕ್ತನಾದ ಅಲ್ಲಾಹನ ಸಹಾಯದ ಅಗತ್ಯವನ್ನು ಕಂಡುಕೊಳ್ಳುತ್ತಾನೆ ಮತ್ತು ಈ ರೀತಿ ಅವನು ತನ್ನಲ್ಲಿ ದುಆಗಾಗಿ ಉತ್ಸಾಹವು ಹುಟ್ಟುತ್ತದೆ.**

## ಸಯ್ಯದುನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು

**ಖುಲಿಖಲ್ ಇನ್ಸಾನು ಝಈಫಾ** (ಅನ್ನಿಸಾಅ್: 29) ಅಂದರೆ ಮಾನವ ಸ್ವಭಾವವು ದುರ್ಬಲವಾಗಿದೆ ಎಂಬುದು ನಿಜ. ಮನುಷ್ಯ ದುರ್ಬಲ ಜೀವಿಯಾಗಿದ್ದಾನೆ. ಆತನ ಅಲ್ಲಾಹನ ಅನುಗ್ರಹ ಮತ್ತು ಕರುಣೆಯಿಲ್ಲದೆ ಏನನ್ನೂ ಮಾಡಲು ಸಾಧ್ಯವಿಲ್ಲ. ಆತನ ಅಸ್ತಿತ್ವ ಮತ್ತು ಆತನ ಪಾಲನೆ ಮತ್ತು ಉಳಿವು ಎಲ್ಲವೂ ಸರ್ವಶಕ್ತನಾದ ಅಲ್ಲಾಹನ ಅನುಗ್ರಹದ ಮೇಲೆ ಅವಲಂಬಿತವಾಗಿದೆ. ತನ್ನ ಬುದ್ಧಿವಂತಿಕೆ, ಜ್ಞಾನ ಅಥವಾ ತನ್ನ ಸಂಪತ್ತಿನ ಬಗ್ಗೆ ಹೆಮ್ಮೆಪಡುವ ವ್ಯಕ್ತಿಯೂ ಮೂರ್ಖನಾಗಿದ್ದಾನೆ ಏಕೆಂದರೆ ಇದೆಲ್ಲವೂ ಸರ್ವಶಕ್ತನಾದ ಅಲ್ಲಾಹನ ಕೊಡುಗೆಯಾಗಿದೆ, ಅವನು ಅದನ್ನು ಎಲ್ಲಿಂದ ಪಡೆದುಕೊಂಡನು? ಮತ್ತು ದುಆಗಾಗಿ ಒಬ್ಬ ವ್ಯಕ್ತಿಯು ತನ್ನ ಬಲಹೀನತೆ ಹಾಗೂ ದೌರ್ಬಲ್ಯವನ್ನು ಸಂಪೂರ್ಣವಾಗಿ ಪರಿಗಣಿಸಬೇಕು ಮತ್ತು ಕಲ್ಪಿಸಿಕೊಳ್ಳುವುದು ಅವಶ್ಯಕವಾಗಿದೆ. ಆತನು ತನ್ನ ದೌರ್ಬಲ್ಯವನ್ನು ಎಷ್ಟು ಹೆಚ್ಚು ಪರಿಗಣಿಸುತ್ತಾನೊ ಅವನು ಸರ್ವಶಕ್ತನಾದ ಅಲ್ಲಾಹನ ಸಹಾಯದ ಅಗತ್ಯವನ್ನು ಕಂಡುಕೊಳ್ಳುತ್ತಾನೆ ಮತ್ತು ಈ ರೀತಿಯಲ್ಲಿ ಅವನಲ್ಲಿ ದುಆಗಾಗಿ ಉತ್ಸಾಹವು ಉಂಟಾಗುತ್ತದೆ. ಒಬ್ಬ ವ್ಯಕ್ತಿಯು ಕಷ್ಟದಲ್ಲಿದ್ದಾಗ ಮತ್ತು ದುಃಖ ಅಥವಾ ಸಂಕಟವನ್ನು ಅನುಭವಿಸಿದಾಗ, ಅವನು ಜೋರಾಗಿ ಕೂಗುತ್ತಾನೆ ಮತ್ತು ಇತರರಿಂದ ಸಹಾಯವನ್ನು ಕೇಳುತ್ತಾನೆ. ಅದೇ ರೀತಿ ಅವನು ತನ್ನ ಬಲಹೀನತೆಗಳನ್ನು ಮತ್ತು ದೌರ್ಬಲ್ಯಗಳನ್ನು ಪರಿಗಣಿಸಿದರೆ ಮತ್ತು ಸರ್ವಶಕ್ತನಾದ ಅಲ್ಲಾಹನ ಸಹಾಯದ ಅಗತ್ಯವನ್ನು ಕಂಡುಕೊಂಡರೆ, ಅವನ ಆತ್ಮವು ಸಂಪೂರ್ಣ ಉತ್ಸಾಹ ಮತ್ತು ನೋವಿನಿಂದ ದೈವತ್ವದ ನೆಲೆಯ ಮೇಲೆ ಬಿದ್ದು **ಯಾರಬ್ಬಿ ಯಾರಬ್ಬಿ** ಎಂದು ಕೂಗುತ್ತದೆ. ನೀವು ಪವಿತ್ರ ಖುರ್‌ಆನ್ ಅನ್ನು ಗಾಂಭೀರ್ಯದಿಂದ ಅವಲೋಕಿಸಿದರೆ, ಮೊದಲ ಸೂರಾದಲ್ಲಿ, ಸರ್ವಶಕ್ತನಾದ ಅಲ್ಲಾಹನು ದುಆವನ್ನು ಕಲಿಸಿದ್ದಾನೆ ಎಂದು ನಿಮಗೆ ತಿಳಿಯುತ್ತದೆ. **ಇಹ್ದಿನಸ್ಸಿರಾತಲ್ ಮುಸ್ತಖೀಮ್; ಸಿರಾತಲ್ಲಝೀನ ಅನ್‌ಅಮ್‌ತ ಅಲೈಹಿಮ್ ಗೈರಿಲ್ ಮಗ್‌ಝೂಬಿ ಅಲೈಹಿಮ್ ವಲಝ್ಝಾಲ್ಲೀನ್** (ಅಲ್‌ಫಾತಿಹ: 6-7) ಅಂದರೆ ನೀನು ನಮ್ಮನ್ನು ಸರಿಯಾದ ಮಾರ್ಗದಲ್ಲಿ ನಡೆಸು. ನಿನ್ನ ಅನುಗ್ರಹಕ್ಕೆ ಪಾತ್ರರಾದವರ, ಕ್ರೋಧಕೆ ಈಡಾಗದವರ ಮತ್ತು ದಾರಿತಪ್ಪದವರ ಮಾರ್ಗದಲ್ಲಿ.

ದುಆ ಎಲ್ಲಾ ಲಾಭಗಳು ಮತ್ತು ಪ್ರಯೋಜನಗಳನ್ನು ಒಳಗೊಂಡಿರುವಾಗ ಮತ್ತು ಎಲ್ಲಾ ಹಾನಿ ಮತ್ತು ನಷ್ಟಗಳಿಂದ ರಕ್ಷಿಸಿದಾಗ ಮಾತ್ರ ಅದು ಸಮಗ್ರವಾಗಿರುತ್ತದೆ. ಆದ್ದರಿಂದ ಈ ದುಆದಲ್ಲಿ ಎಲ್ಲಾ ರೀತಿಯ ಉತ್ತಮ ಪ್ರಯೋಜನಗಳು ದೊರಕುತ್ತದೆ ಮತ್ತು ಅದು ಈ ದುಆದಲ್ಲಿ ಇದೆ. ಮತ್ತು ಮನುಷ್ಯನನ್ನು ಕೊಲ್ಲುವ ದೊಡ್ಡ ಹಾನಿಕಾರಕ ವಿಷದಿಂದ ತಪ್ಪಿಸುವ ದುಆ ಆಗಿದೆ.

ಅನುಗ್ರಹಕ್ಕೆ ಪಾತ್ರರಾದವರು ನಾಲ್ಕು ರೀತಿಯ ಜನರಿದ್ದಾರೆ ಎಂದು ನಾನು ಪದೇ ಪದೇ ತಿಳಿಸಿದ್ದೇನೆ. ಮೊದಲು ನಬಿ. ಎರಡನೇಯದ್ದು ಸಿದ್ದೀಖ್. ಮೂರನೇಯದು ಶಹೀದ್. ನಾಲ್ಕನೆಯದು ಸಾಲಿಹೀನ್‌ನ ಗುಂಪಾಗಿದೆ. ಹೀಗೆ ಈ ದುಆದಲ್ಲಿ, ಈ ನಾಲ್ಕು ಗುಂಪುಗಳ ಪರಿಪೂರ್ಣತೆಗಳನ್ನು ತಿಳಿಸಲಾಗಿದೆ.

**(ಮಲ್ಫೂಝಾತ್, ಸಂಪುಟ-1, ಪುಟ-372, 2018 ಖಾದಿಯಾನ್ ಪ್ರಕಟಿತ)**

## ಅಂತಿಮ ವಿಜಯ

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನುಡಿಯುತ್ತಾರೆ: ಪ್ರಾಯಶಃ ಕೊನೆಗೆ ಕ್ರೈಸ್ತ ಧರ್ಮ ಲೋಕದಾದ್ಯಂತ ವ್ಯಾಪಿಸುವುದೆಂದು ಅಥವಾ ಬೌದ್ಧ ಧರ್ಮ ಲೋಕವನ್ನೆಲ್ಲ ಆವರಿಸುವುದೆಂದು ಭೂಲೋಕದ ಜನರು ಆಲೋಚಿಸುತ್ತಿರಬಹುದು. ಆದರೆ ಅವರ ಈ ಯೋಚನೆ ತಪ್ಪಾಗಿದೆ. ಆಕಾಶದಲ್ಲಿ ದೇವನಿಂದ ನಿರ್ಧರಿಸಲ್ಪಡುವವರೆಗೆ ಯಾವುದೇ ಕಾರ್ಯವು ಭೂಮಿಯಲ್ಲಿ ಸಂಭವಿಸಲಾರದು. ಅಂತಿಮವಾಗಿ ಇಸ್ಲಾಮ್ ಧರ್ಮ ಜನರ ಹೃದಯಗಳನ್ನು ಜಯಿಸುವುದು ಎಂದು ಆಕಾಶ ಭೂಮಿಗಳ ಅಧಿಪತಿಯಾದ ದೇವನು ನನಗೆ ತಿಳಿಸಿರುವನು.

**(ಬರಾಹೀನೆ ಅಹ್ಮದಿಯಾ, ಭಾಗ 5; ರೂಹಾನೀ ಖಝಾಇನ್ ಸಂಪುಟ 21, ಪುಟ 427)**

# ಖುತ್‌ಬ ಜುಮುಅ

ಅಲ್ಲಾಹನು ಆರ್ಥಿಕ ತ್ಯಾಗಕ್ಕೆ ಎಷ್ಟರ ಮಟ್ಟಕ್ಕೆ ಪ್ರಾಮುಖ್ಯತೆಯನ್ನು ನೀಡಿದ್ದಾನೆ ಎಂದರೆ ಸರ್ವಶಕ್ತನಾದ ಅಲ್ಲಾಹನನ್ನು ಮೆಚ್ಚುವ ನೈಜವಾದ ಒಳಿತನ್ನು ಅಲ್ಲಾಹನ ಸಂತೋಷವನ್ನು ಪಡೆಯಲು ಮಾಡಿದರೆ ಅದು ಉತ್ತಮವೆಂದು ಪರಿಗಣಿಸಲ್ಪಡುತ್ತದೆ. ತಮ್ಮ ಪ್ರೀತಿಯ ವಸ್ತುವನ್ನು ಸರ್ವಶಕ್ತನಾದ ಅಲ್ಲಾಹನನ್ನು ಮೆಚ್ಚಿಸಲು ಮನುಕುಲದ ಸಹಾನುಭೂತಿಯಲ್ಲಿ ಖರ್ಚು ಮಾಡಬೇಕು

**ವಖ್ಫೇ ಜದೀದ್‌ನ ಅರವತ್ತೈದನೇ ವರ್ಷದಲ್ಲಿ ಜಾಗತೀಕ ಅಹ್ಮದಿಯಾ ಜಮಾಅತ್‌ನ ಕಡೆಯಿಂದ ಒಂದು ಕೋಟಿ ಇಪ್ಪತ್ತೆರಡು ಲಕ್ಷ ಹದಿನೈರು ಸಾವಿರ ಪೌಂಡ್ (1,22,15,000) ಅಸಾಧಾರಣ ತ್ಯಾಗವನ್ನು ಅರ್ಪಿಸಲಾಯಿತು.**

ಅಲ್ಲಹನ ಮಾರ್ಗದಲ್ಲಿ ತನಗೆ ಪ್ರೀಯವಾದ ಸಂಪತ್ತು ಸ್ವೀಕೃತವಾಗುತ್ತದೆ.

ಬಿಟ್‌ಕೈಯಿನ್ ಇತ್ಯಾದಿಗಳ ಈ ವ್ಯವಹಾರವೂ ನನ್ನ ಪ್ರಕಾರ ಒಂದು ರೀತಿಯ ಜೂಜಾಟವಾಗಿದೆ.

ಹಝ್ರತ್ ಮಸೀಹ್ ಮೌಊದ್(ಅ)ರ ನಂತರ ಜಾರಿಯಾದ ಖಿಲಾಫತ್ ವ್ಯವಸ್ಥೆಯಲ್ಲೂ ಪ್ರತಿ ಖಲೀಫರ ಕಾಲದಲ್ಲೂ ತ್ಯಾಗಮಾಡುವವರನ್ನು ಅಲ್ಲಾಹನು ದಯಪಾಲಿಸುತ್ತಾ ಹೋಗುತ್ತಿದ್ದಾನೆ. ಅವರು ತಮ್ಮ ಆವಶ್ಯಕತೆಗಳನ್ನು ಹಿಂದಕ್ಕೆ ಹಾಕಿಕೊಂಡು ಉತ್ಸಾಹದಿಂದ ತ್ಯಾಗಗಳನ್ನು ಮಾಡುತ್ತಿದ್ದಾರೆ. ಜಮಾಅತಿನ ಸದಸ್ಯರು ಅಲ್ಲಾಹನ ಕೃಪೆಯಿಂದ ಬಹಳ ಉತ್ಸಾಹದಿಂದ ಇದರಲ್ಲಿ ಪಾಲ್ಗೊಳ್ಳುತ್ತಾರೆ.

ಅಲ್ಲಾಹನ ಮಾರ್ಗದಲ್ಲಿ ಮಾಡಿದ ತ್ಯಾಗವು ಇಹಲೋಕದಲ್ಲಿ ಮಾತ್ರ ಪ್ರಯೋಜನಕಾರಿಯಲ್ಲ, ಮರಣಾನಂತರದ ಮುಂದಿನ ಲೋಕದಲ್ಲೂ ಪ್ರಯೋಜನವನ್ನು ನೀಡುತ್ತದೆ.

ಇದು ಯೋಚಿಸುವ ವಿಷಯವಾಗಿದೆ, ಲೌಕಿಕ ವ್ಯಕ್ತಿಯು ಬೇರೆಯದನ್ನು ಯೋಚಿಸುತ್ತಾನೆ, ಆದರೆ ಧರ್ಮನಿಷ್ಠನು ಮಾತ್ರ ಅಲ್ಲಾಹನ ಮಾರ್ಗದಲ್ಲಿ ಖರ್ಚು ಮಾಡುವುದರಿಂದ ಅವನ ಅನುಗ್ರಹಗಳು ಸಂಭವಿಸುತ್ತವೆ ಎಂದು ಭಾವಿಸುತ್ತಾನೆ.

**ವಖ್ಫೆ ಜದೀದ್‌ನ 66ನೇ ವರ್ಷದ ಪ್ರಾರಂಭದ ಘೋಷಣೆ, ಪ್ರಪಂಚದಾದ್ಯಂತ ವಾಸಿಸುತ್ತಿರುವ ಅಹ್ಮದಿಯರ ಆರ್ಥಿಕ ತ್ಯಗಗಳ ಪ್ರಸ್ತಾವನೆ**

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಟಿಲ್‌ಫೋರ್ಡ್, ಯು.ಕೆ, ಇಸ್ಲಾಮಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **06-01-2023** ರಂದು ನೀಡಿದ **ಖುತ್‌ಬ ಜುಮುಅ**

أَشْهَدُ أَنْ لَّا إِلٰهَ إِلَّا اللّٰهُ وَحْدَهُ لَا شَرِيكَ لَهُ وَأَشْهَدُ أَنَّ مُحَمَّدًا عَبْدُهُ وَرَسُولُهُ

أَمَّا بَعْدُ فَأَعُوذُ بِاللّٰهِ مِنَ الشَّيْطٰنِ الرَّجِيمِ - بِسْمِ اللّٰهِ الرَّحْمٰنِ الرَّحِيمِ

اَلْحَمْدُ لِلّٰهِ رَبِّ الْعٰلَمِيْنَ ۔ اَلرَّحْمٰنِ الرَّحِيْمِ ۔ مٰلِكِ يَوْمِ الدِّيْنِ ۔

اِيَّاكَ نَعْبُدُ وَاِيَّاكَ نَسْتَعِيْنُ ۔ اِهْدِنَا الصِّرَاطَ الْمُسْتَقِيْمَ ۔

صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ ۔

**ಲನ್ ತನಾಲುಲ್ ಬಿರ್ರ ಹತ್ತಾ ತುನ್‌ಫಿಖೂ ಮಿಮ್ಮಾ ತುಹಿಬ್ಬೂನ್. ವಮಾ ತುನ್‌ಫಿಖೂ ಮಿನ್ ಶೈಯಿನ್ ಫ ಇನ್ನಲ್ಲಾಹ ಬಿಹೀ ಅಲೀಂ.** (ಆಲಿಇಮ್ರಾನ್:93)

ಈ ವಚನದ ಅರ್ಥ ಹೀಗಿದೆ: ನಿಮಗೆ ಪ್ರಿಯವಾದವುಗಳಿಂದ ದೇವಮಾರ್ಗದಲ್ಲಿ ವ್ಯಯಿಸುವ ವರೆಗೆ ನೀವು ಪರಿಪೂರ್ಣ ಒಳಿತನ್ನು ಗಳಿಸಲಾರಿರಿ. ನೀವು ಖರ್ಚು ಮಾಡುವುದನ್ನೆಲ್ಲ ಅಲ್ಲಾಹನು ಚೆನ್ನಾಗಿ ಬಲ್ಲನು. ಈ ವಚನಕ್ಕೆ ವಿವರಣೆ ನೀಡುತ್ತಾ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಅಲ್ಲಾಹನ ಸಂಪ್ರೀತಿಗಾಗಿ ನಿಮಗೆ ಪ್ರಿಯವಾದವುಗಳಿಂದ ದೇವಮಾರ್ಗದಲ್ಲಿ ವ್ಯಯಿಸುವ ವರೆಗೆ ಮೋಕ್ಷದ ಕಡೆಗೆ ಕೊಂಡೊಯ್ಯುವ ನೈಜ ಒಳಿತನ್ನು ಖಂಡಿತ ಗಳಿಸಲಾರಿರಿ. (ಫತಹ್ ಇಸ್ಲಾಮ್, ರೂಹಾನಿ ಖಝಾಈನ್, ಸಂಪುಟ-3, ಪುಟ-38)

ಮತ್ತೊಂದೆಡೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದರು: "ನೀವು ನಿಮ್ಮ ಪ್ರೀತಿಯ ಸಂಪತ್ತನ್ನು ಮನುಕುಲದ ಸಹಾನುಭೂತಿಯಲ್ಲಿ ವ್ಯಯಿಸದ ಹೊರತು ನೀವು ನಿಜವಾದ ಒಳ್ಳೆಯತನವನ್ನು ಕಂಡುಕೊಳ್ಳಲು ಸಾಧ್ಯವಿಲ್ಲ."

(ಇಸ್ಲಾಮಿ ಉಸೂಲ್ ಕೀ ಫಿಲಾಸಫಿ, ರೂಹಾನಿ ಖಝಾಈನ್, ಸಂಪುಟ-10, ಪುಟ-358)

ಹೀಗೆ ಸರ್ವಶಕ್ತನಾದ ಅಲ್ಲಾಹನು ಆರ್ಥಿಕ ತ್ಯಾಗಕ್ಕೆ ಎಷ್ಟರ ಮಟ್ಟಕ್ಕೆ ಪ್ರಾಮುಖ್ಯತೆಯನ್ನು ನೀಡಿದ್ದಾನೆ ಎಂದರೆ ಸರ್ವಶಕ್ತನಾದ ಅಲ್ಲಾಹನನ್ನು ಮೆಚ್ಚುವ ನೈಜವಾದ ಒಳಿತನ್ನು ಅಕ್ಕಾಹನ ಸಂತೋಷವನ್ನು ಪಡೆಯಲು ಮಾಡಿದರೆ ಅದು ಉತ್ತಮವೆಂದು ಪರಿಗಣಿಸಲ್ಪಡುತ್ತದೆ. ತಮ್ಮ ಪ್ರೀತಿಯ ವಸ್ತುವನ್ನು ಸರ್ವಶಕ್ತನಾದ ಅಲ್ಲಾಹನನ್ನು ಮೆಚ್ಚಿಸಲು ಮನುಕುಲದ ಸಹಾನುಭೂತಿಯಲ್ಲಿ ಖರ್ಚು ಮಾಡಬೇಕು ಹೀಗೆ ಈ ತ್ಯಾಗವು ಮೋಕ್ಷದ ಕಡೆಗೆ ಕೊಂಡೊಯ್ಯುತ್ತದೆ. ಒಂದೆಡೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನುಡಿಯುತ್ತಾರೆ: ಕಾಯಿಲೆಯಲ್ಲಿ ಬಳಲುತ್ತಿರುವ ತನ್ನ ಹಸುವನ್ನು ಅದು ಸಾಯುವ ಸ್ಥಿತಿಗೆ ತಲುಪಿದಾಗ ಅಲ್ಲಾಹನ ಮಾರ್ಗದಲ್ಲ ನೀಡುವುದು ಅಥವಾ ಯಾರಾದರು ಮನೆಯ ಬಾಗಿಲಿಗೆ ಬಂದ ಬಡವನಿಗೆ ಮನೆಯಲ್ಲಿದ್ದ ಹಳಸಿದ ರೊಟ್ಟಿಯನ್ನು ನೀಡುವುದು, ಆ ರೊಟ್ಟಿಯನ್ನು ಮನೆಯವರು ತಿನ್ನಲು ಅಸಾಧ್ಯವಿರುವ ಹಳಸಿದ ರೊಟ್ಟಿಯನ್ನು ಆ ಬಡವನಿಗೆ ನೀಡುವುದು ಒಳಿತಲ್ಲ. ಈ ವಸ್ತುಗಳು ಅವನಿಗೆ ಯಾವುದೇ ಪ್ರಯೋಜನಕ್ಕೆ ಬಾರದ ವಸ್ತುಗಳಾಗಿವೆ.

ಅಲ್ಲಾಹನ ಮಾರ್ಗದಲ್ಲಿ ತನಗೆ ಪ್ರೀಯವಾದ ಸಂಪತ್ತಾಗಿರಬೇಕು, ಆ ಸಂಪತ್ತನ್ನು ಸರ್ವಶಕ್ತನಾದ ಅಲ್ಲಾಹನ ಸಂತೋಷವನ್ನು ಪಡೆಯಲು ಅದನ್ನು ತ್ಯಾಗ ಮಾಡಬೇಕು.

ಇದು ನಿಜವಾದ ಒಳಿತಾಗಿದೆ. ಇದು ಸಹಾನುಭೂತಿಯ ನಿಜವಾದ ಸ್ವರೂಪವನ್ನು ತೋರಿಸುತ್ತದೆ. ನಮ್ಮ ಹೃದಯವು ಇತರರಿಗೆ ಎಷ್ಟು ಕಾಳಜಿವಹಿಸುತ್ತದೆ ಎಂಬುದನ್ನು ತೋರಿಸುತ್ತದೆ. ಧರ್ಮದ ಸೇವೆಯಲ್ಲಿ ನಮ್ಮ ಉತ್ಸಾಹ ಎಷ್ಟು ಇದೆ ಮತ್ತು ಅದರ ಬಗ್ಗೆ ನಮ್ಮ ಭಾವನೆಗಳು ಏನಾಗಿದೆ ಎಂಬುದನ್ನು ತೋರುತ್ತದೆ.

(ಮಲ್‌ಫೂಝಾತ್, ಸಂಪುಟ-8, ಪುಟ-19, 1984 ಆವೃತ್ತಿ)

ಮತ್ತೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಒಂದು ಸ್ಥಳದಲ್ಲಿ ಹೇಳುತ್ತಾರೆ: "ಈ ಜಗತ್ತಿನಲ್ಲಿ ಮನುಷ್ಯನು ಸಂಪತ್ತನ್ನು ತುಂಬಾ ಪ್ರೀತಿಸುತ್ತಾನೆ. ಈ ಕಾರಣಕ್ಕಾಗಿ, ಒಬ್ಬ ವ್ಯಕ್ತಿಯು ತನ್ನ ಹೃದಯವನ್ನು ಹೊರತೆಗೆದು ಯಾರಿಗಾದರೂ ನೀಡಿದ್ದಾನೆ ಎಂದು ಕನಸ್ಸಿನಲ್ಲಿ ಕಂಡರೆ ಅದರ ಅರ್ಥ ಸಂಪತ್ತಾಗಿದೆ ಎಂದು ಸ್ವಪ್ನ ವ್ಯಾಖ್ಯಾನಗಾರರು ಬರೆದಿದ್ದಾರೆ. ಯಥಾರ್ಥ ದೇವಭಕ್ತಿ ಮತ್ತು ಸತ್ಯವಿಶ್ವಾಸವನ್ನು ಗಳಿಸಲಿಕ್ಕಾಗಿ ಅಲ್ಲಾಹನು ಹೀಗೆ ಹೇಳಿರುವನು: **ಲನ್ ತನಾಲುಲ್ ಬಿರ್ರ ಹತ್ತಾ ತುನ್‌ಫಿಖೂ ಮಿಮ್ಮಾ ತುಹಿಬ್ಬೂನ್**. ಎಂದರೆ ನಿಮಗೆ ಪ್ರಿಯವಾದವುಗಳನ್ನು ವ್ಯಯಿಸುವ ವರೆಗೆ ನೈಜ ಒಳಿತನ್ನು ಖಂಡಿತ ಗಳಿಸಲಾರಿರಿ. ಏಕೆಂದರೆ ದೇವ ಸೃಷ್ಟಿಗಳೊಂದಿಗೆ ಸಹಾನುಭೂತಿ ಮತ್ತು ಉತ್ತಮ ವರ್ತನೆ ತೋರಿಸಲು ಪ್ರಧಾನವಾಗಿ ಧನದ ಖರ್ಚಿನ ಅಗತ್ಯವಿದೆ. ಮನುಕುಲ ಮತ್ತು ದೇವನ ಇತರ ಸೃಷ್ಟಿಗಳೊಂದಿಗೆ ಅನುಕಂಪ ತೋರಿಸುವುದು ಸತ್ಯವಿಶ್ವಾಸದ ಎರಡನೇ ಭಾಗವಾಗಿದೆ. ಅದರ ಹೊರತು ಸತ್ಯವಿಶ್ವಾಸ ಪರಿಪೂರ್ಣ ಮತ್ತು ಸುದೃಢವಾಗುವುದಿಲ್ಲ. ಮನುಷ್ಯನು ತ್ಯಾಗಮಾಡದೇ ಇತರರಿಗೆ ಪ್ರಯೋಜನ ತಲುಪಿಸಲು ಹೇಗೆ ಸಾಧ್ಯ? ಈ ವಚನದಲ್ಲಿ ಇದೇ ತ್ಯಾಗದ ಪಾಠ ಮತ್ತು ಮಾರ್ಗದರ್ಶನ ನೀಡಲಾಗಿದೆ.

ಒಟ್ಟಿನಲ್ಲಿ ಸಂಪತ್ತನ್ನು ಅಲ್ಲಾಹನ ಮಾರ್ಗದಲ್ಲಿ ಖರ್ಚು ಮಾಡುವುದು ಕೂಡ ಮನುಷ್ಯನ ಸೌಭಾಗ್ಯವಾಗಿದೆ. ಅದು ದೇವಭಕ್ತಿಯ ಮಟ್ಟವೂ ದೇವಪ್ರೇಮದ ಸುಗಂಧವೂ ಆಗಿದೆ. ಹಝ್ರತ್ ಅಬೂಬಕರ್(ರ)ರ ಜೀವಿತದಲ್ಲಿ ಅಲ್ಲಾಹನಿಗಾಗಿ ಸಮರ್ಪಣೆಯ ಮಟ್ಟ ಮತ್ತು ಸುಗಂಧ ಏನಾಗಿತ್ತು ಎಂದರೆ, ಹಝ್ರತ್ ಪೈಗಂಬರ್(ಸ) ಒಂದು ಆವಶ್ಯಕತೆಯನ್ನು ಮುಂದಿಟ್ಟಾಗ ಅವರು ಮನೆಯಲ್ಲಿದ್ದ ಎಲ್ಲವನ್ನು ತೆಗೆದುಕೊಂಡು ಹಾಜರಾದರು. (ಮಲ್‌ಫೂಝಾತ್, ಸಂಪುಟ-2, ಪುಟ-35-36, 1984 ಆವೃತ್ತಿ)

ಆದ್ದರಿಂದ, ಇವುಗಳು ತ್ಯಾಗ ಮತ್ತು ಪ್ರೀಯ ಸಂಪತ್ತಿನ ತ್ಯಾಗಗಳ

ಮಾನದಂಡಗಳಾಗಿವೆ ಇವುಗಳ ಅತ್ಯುನ್ನತ ಉದಾಹರಣೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರು ಹೇಳಿದಂತೆ, ಹಝ್ರತ್ ಅಬುಬಕರ್ ಸಿದ್ದಿಖ್(ರ) ಸ್ಥಾಪಿಸಿದರು ಮತ್ತು ನಂತರ ಸಹಾಬರವರು ತಮ್ಮ ಸಾಮರ್ಥ್ಯಕ್ಕನುಗುಣವಾಗಿ ತ್ಯಾಗಗಳ ಮಾನದಂಡವನ್ನು ಸ್ಥಾಪಿಸಿದರು.

ಹಝ್ರತ್ ಮಸೀಹ್ ಮೌಊದ್(ಅ)ರ ಕಾಲದಲ್ಲೂ ಅವರ ಮಹತ್ಕಾರ್ಯವನ್ನು ಈಡೇರಿಸಲು ಸಾಹಿತ್ಯಗಳ ಪ್ರಕಾಶನ ಮತ್ತು ಇಸ್ಲಾಮಿನ ಪ್ರಚಾರದಲ್ಲಿ ಅತ್ಯುತ್ತಮ ಮಾದರಿಯನ್ನು ಹಝ್ರತ್ ಹಕೀಂ ಮೌಲಾನ ನೂರುದ್ದೀನ್ ಖಲೀಫತುಲ್ ಮಸೀಹ್ ಅವ್ವಲ್(ರ) ತೋರಿಸಿದ್ದರು. ಅವರು ಹಝ್ರತ್ ಮಸೀಹ್ ಮೌಊದ್(ಅ)ರಿಗೆ ಹೀಗೆ ಪತ್ರ ಬರೆದರು: "ನಾನು ನಿಮ್ಮ ಮಾರ್ಗದಲ್ಲಿ ಬಲಿದಾನಗೊಂಡಿದ್ದೇನೆ. ನನ್ನ ಬಳಿಯಲ್ಲಿರುವುದೆಲ್ಲ ನನ್ನದ್ದಲ್ಲ, ನಿಮ್ಮದು. ಹೇ ನನ್ನ ಗುರು, ಮಾರ್ಗದರ್ಶಿ, ನಾನು ಪರಿಪೂರ್ಣ ನಿಷ್ಠೆಯಿಂದ ನಿವೇದಿಸುತ್ತೇನೆ. ನನ್ನ ಪೂರ್ತಿ ಹಣ ಮತ್ತು ಸಂಪತ್ತು ಧರ್ಮದ ಪ್ರಚಾರಕ್ಕಾಗಿ ಖರ್ಚಾದರೆ ನಾನು ಗುರಿಯನ್ನು ತಲುಪಿದೆ." ಮತ್ತೆ ಅವರು ಬರೆದರು....... ನನಗೆ ನಿಮ್ಮೊಂದಿಗೆ ಫಾರೂಖೀಯ ಸಂಬಂಧವಿದೆ ಮತ್ತು ನಾನು ಈ ಮಾರ್ಗದಲ್ಲಿ ಎಲ್ಲಾ ರೀತಿಯ ತ್ಯಾಗಕ್ಕೆ ಸಿದ್ಧನಿದ್ದೇನೆ. ನನ್ನ ಮರಣವು ನೀತಿವಂತರ ಮರಣವಾಗಲಿ ಎಂದು ಪ್ರಾರ್ಥಿಸಿರಿ." (ಫತಹ್ ಇಸ್ಲಾಂ, ರೂಹಾನಿ ಖಝಾಈನ್, ಸಂಪುಟ–3, ಪುಟ–36)

ಇದೇ ರೀತಿಯಲ್ಲಿ ಹಝ್ರತ್ ಮಸೀಹ್ ಮೌಊದ್(ಅ)ರ ಅನೇಕ ಸಹಾಬಿಯರು ತಮ್ಮ ತಮ್ಮ ಸಾಮರ್ಥ್ಯಕ್ಕೆ ಅನುಸಾರ ಮಹತ್ತಾದ ತ್ಯಾಗಗಳನ್ನು ಮಾಡಿದ್ದರು. ಆ ತ್ಯಾಗಗಳನ್ನು ನೋಡಿ ನನಗೆ ಆಶ್ಚರ್ಯವಾಗುತ್ತದೆ ಎಂದು ಹಝ್ರತ್ ಮಸೀಹ್ ಮೌಊದ್(ಅ) ಹೇಳಿದ್ದರು. ತ್ಯಾಗದ ಈ ಉತ್ಸಾಹ ಜಮಾಅತಿನ ಸದಸ್ಯರಲ್ಲಿ ಎಷ್ಟಿದೆ ಎಂದರೆ, ಹಝ್ರತ್ ಮಸೀಹ್ ಮೌಊದ್(ಅ)ರ ನಂತರ ಜಾರಿಯಾದ ಖಿಲಾಫತ್ ವ್ಯವಸ್ಥೆಯಲ್ಲೂ ಪ್ರತಿ ಖಲೀಫರ ಕಾಲದಲ್ಲೂ ತ್ಯಾಗಮಾಡುವವರನ್ನು ಅಲ್ಲಾಹನು ದಯಪಾಲಿಸುತ್ತಾ ಹೋಗುತ್ತಿದ್ದಾನೆ. ಅವರು ತಮ್ಮ ಆವಶ್ಯಕತೆಗಳನ್ನು ಹಿಂದಕ್ಕೆ ಹಾಕಿಕೊಂಡು ಉತ್ಸಾಹದಿಂದ ತ್ಯಾಗಗಳನ್ನು ಮಾಡುತ್ತಿದ್ದಾರೆ. ಜಮಾಅತಿನ ಸದಸ್ಯರು ಅಲ್ಲಾಹನ ಕೃಪೆಯಿಂದ ಬಹಳ ಉತ್ಸಾಹದಿಂದ ಇದರಲ್ಲಿ ಪಾಲ್ಗೊಳ್ಳುತ್ತಾರೆ. ಎಂತಹ ಉದಾಹರಣೆಗಳು ಇವೆ ಎಂದರೆ, ತ್ಯಾಗ ಮಾಡುವವರು ಲೌಕಿಕವಾದ ಪ್ರಯೋಜನವನ್ನು ಮಾತ್ರ ಪಡೆಯುವುದಿಲ್ಲ, ಅದರೊಂದಿಗೆ ಅವರ ವಿಶ್ವಾಸ ವರ್ಧಿಸುತ್ತದೆ.

ಆದಾಗ್ಯೂ, ಇಂದಿನ ಖುತ್‌ಬವು, ಜನವರಿಯ ಮೊದಲ ಖುತ್‌ಬವಾಗಿದ್ದು, ಸಾಮಾನ್ಯವಾಗಿ ವಖ್ಫೆ ಜದೀದ್‌ನ ಹೊಸ ವರ್ಷವನ್ನು ಘೋಷಿಸುವ ಬಗ್ಗೆ ಇರುತ್ತದೆ. 1957 ರಲ್ಲಿ, ಹಝ್ರತ್ ಮುಸ್ಲೆಹ್ ಮೌಊದ್(ರ) ಅವರು ಹಳ್ಳಿಗಳಲ್ಲಿ ತರಬೇತಿ ಮತ್ತು ಪ್ರಚಾರಕ್ಕಾಗಿ ಪ್ರಾರಂಭಿಸಿದ ಈ ಚಳುವಳಿಯನ್ನು ಪ್ರಾರಂಭಿಸಿದರು, ಅದು ಮೊದಲು ಪಾಕಿಸ್ತಾನಕ್ಕೆ ಮಾತ್ರ ಸೀಮಿತವಾಗಿತ್ತು. ನಂತರ ಖಿಲಾಫತೆ ರಾಬಿಯಾದ ಕಾಲಘಟ್ಟದಲ್ಲಿ ಇದನ್ನು ಎಲ್ಲಾ ದೇಶಗಳಿಗೆ ವಿಸ್ತರಿಸಲಾಯಿತು ಮತ್ತು ಅಭಿವೃದ್ಧಿ ಹೊಂದಿದ ದೇಶಗಳ ಹಣವನ್ನು ಆಫ್ರಿಕನ್ ದೇಶಗಳಲ್ಲಿ ತರಬೇತಿ ಮತ್ತು ಉಪದೇಶಕ್ಕಾಗಿ ಖರ್ಚು ಮಾಡಬೇಕೆಂದು ಹಝ್ರತ್ ಖಲೀಫತುಲ್ ಮಸೀಹ್ ರಾಬಿ(ರ) ತಿಳಿಸಿದ್ದರು ಮತ್ತು ಇದು ಸಾಮಾನ್ಯವಾಗಿ ಪ್ರಸ್ತುತ ಕಾಲದಲ್ಲಿಯೂ ಚಾಲನೆಯಲ್ಲಿದೆ. ಈ ಚಂದದ ಆದಾಯವನ್ನು ಆಫ್ರಿಕಾ ಮತ್ತು ಇತರ ಬಡ ದೇಶಗಳಲ್ಲಿ ಖರ್ಚು ಮಾಡಲಾಗುತ್ತದೆ. ಜಮಾಅತ್‌ನ ಸದಸ್ಯರು ಸರ್ವಶಕ್ತನಾದ ಅಲ್ಲಾಹನ ಅನುಗ್ರಹದಿಂದ ಇದರಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಾರೆ. ಆದರೆ ಆಫ್ರಿಕಾ ಮತ್ತು ಇತರ ಅಭಿವೃದ್ಧಿ ಹೊಂದಿದ ಅಥವಾ ಅಭಿವೃದ್ಧಿಶೀಲ ರಾಷ್ಟ್ರಗಳ ಅಹ್ಮದಿಗಳು ಇದರಲ್ಲಿ ಭಾಗವಹಿಸುತ್ತಿಲ್ಲ ಎಂದು ಅರ್ಥವಲ್ಲ. ಈ ಜನರ ತ್ಯಾಗವು ಅವರ ಆದಾಯ ಮತ್ತು ಸಂದರ್ಭಗಳಿಗೆ ಅನುಗುಣವಾಗಿ ಶ್ಲಾಘನೀಯವಾಗಿದೆ, ಆದರೆ ಹೆಚ್ಚಿನ ವೆಚ್ಚವನ್ನು ಶ್ರೀಮಂತ ದೇಶಗಳು ಮತ್ತು ಅಭಿವೃದ್ಧಿ ಹೊಂದಿದ ದೇಶಗಳ ಚಂದಗಳಿಂದ ಭರಿಸಲಾಗುತ್ತದೆ. ಈ ತ್ಯಾಗಗಳನ್ನು ಎಲ್ಲೆಡೆ ಮಾಡುವವರಿಗೆ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವಸಲ್ಲಮ್ ಅವರು ಹದೀಸ್‌ನಲ್ಲಿ ಹೇಳಿದ್ದನ್ನು ಸಂಪೂರ್ಣವಾಗಿ ತಿಳಿದಿರುತ್ತಾರೆ: ಅಂದರೆ "ಓ ಆದಮ್‌ನ ಸಂತತೀಯರೇ! ನೀನು ನಿನ್ನ ನಿಧಿಯನ್ನು ನನ್ನ ಬಳಿ ಠೇವಣಿ ಇಟ್ಟು ತೃಪ್ತನಾಗು. ಬೆಂಕಿ ತಾಗುವ ಅಪಾಯವಿಲ್ಲ, ನೀರಿನಲ್ಲಿ ಮುಳುಗುವ ಭಯವಿಲ್ಲ ಮತ್ತು ಕಳ್ಳನಿಂದ ಕಳ್ಳತನದ ಭಯವಿಲ್ಲ. ನನ್ನ ಬಳಿ ಇಟ್ಟಿರುವ ನಿಧಿಯನ್ನು ನಾನು ನಿನಗೆ ಸಂಪೂರ್ಣವಾಗಿ ನಿನಗೆ ಅತೀ ಅಗತ್ಯ ಬಿದ್ದ ದಿನ ನೀಡುತ್ತೇನೆ.

(ಕನ್‌ಝುಲ್ ಅಲ್‌ಮಾಲ್, ಸಂಪುಟ–6, ಪುಟ–352, ಹದೀಸ್ ಸಂಖ್ಯೆ–16021, ಮುಅಸ್ಸಸಲು ರಿಸಾಲ ಬೈರೂತ್ 1985)

ಆದುದರಿಂದ ಅಲ್ಲಾಹನ ಮಾರ್ಗದಲ್ಲಿ ಮಾಡಿದ ತ್ಯಾಗವು ಇಹಲೋಕದಲ್ಲಿ ಮಾತ್ರ ಪ್ರಯೋಜನಕಾರಿಯಲ್ಲ, ಮರಣಾನಂತರದ ಮುಂದಿನ ಲೋಕದಲ್ಲೂ ಪ್ರಯೋಜನವನ್ನು ನೀಡುತ್ತದೆ.

ಸರ್ವಶಕ್ತನಾದ ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ಹೇಳುತ್ತಾನೆ: **ವಮಾ ತುನ್‌ಫಿಖೂ ಖೈಇಯ್ಯುವಫ್ಫ ಇಲೈಕುಮ್ ವ ಅನ್ತುಮ್ ಲಾ ತುಝ್ಲಮೂನ್** (ಅಲ್‌ಬಖರ:273) ಮತ್ತು ನೀವು ನಿಮ್ಮ ಸಂಪತ್ತಿನಿಂದ ಏನು ಖರ್ಚು ಮಾಡುತ್ತೀರೋ ಅದು ನಿಮಗೆ ಹಿಂತಿರುಗಿಸಲಾಗುತ್ತದೆ. ಈ ವಿಷಯದಲ್ಲಿ ನಿಮ್ಮೊಂದಿಗೆ ಎಂದಿಗೂ ಅನ್ಯಾಯವಾಗುವುದಿಲ್ಲ. ಹೀಗೆ ಸರ್ವಶಕ್ತನಾದ ಅಲ್ಲಾಹನು ವಾಗ್ದಾನ ಮಾಡಿದಾಗ ಅದನ್ನು ಅವಶ್ಯಕವಾಗಿ ಪೂರೈಸುತ್ತಾನೆ. ಆತನು ಈ ಜಗತ್ತಿನಲ್ಲಿಯೂ ತನ್ನ ಉದಾಹರಣೆಗಳನ್ನು ತೋರಿಸುತ್ತಾನೆ. ಇದರಿಂದ ನಾವು ಮುಂದಿನ ಪ್ರಪಂಚದಲ್ಲಿಯೂ ಸರ್ವಶಕ್ತನಾದ ಅಲ್ಲಾಹನ ಪ್ರತಿಫಲವನ್ನು ಪಡೆದುಕೊಳ್ಳುತ್ತೇವೆ ಎಂಬ ನಂಬಿಕೆಯಲ್ಲಿ ನಾವು ನೆಲೆಗೊಳ್ಳಬಹುದು. ಲೌಕಿಕ ಸಂಸ್ಥೆಗಳು ವ್ಯವಹಾರಗಳಲ್ಲಿ ಹಣ ಹೂಡಿ ಕೆಲವು ಕಾಲ ನಷ್ಟ ಅಥವಾ ಲಾಭವನ್ನು ಗಳಿಸಿ ನಂತರ ಕೇವಲ ಲೌಕಿಕ ಲಾಭವನ್ನು ಗಳಿಸುವ ಲೌಕಿಕ ಸಂಸ್ಥೆಗಳಂತಲ್ಲ. ಭವಿಷ್ಯಕ್ಕೆ ಯಾವುದೇ ಗ್ಯಾರಂಟಿ ಇಲ್ಲ, ಆದರೆ ಜಗತ್ತಿನಲ್ಲಿ ಕೆಲವು ವ್ಯವಹಾರಗಳು ಸ್ವಲ್ಪ ಸಮಯದವರೆಗೆ ಲಾಭವನ್ನು ನೀಡುತ್ತದೆ. ಅವುಗಳನ್ನು ನಡೆಸುವ ಜನರು ಎಲ್ಲವನ್ನೂ ತಿನ್ನುಬಿಡುತ್ತಾರೆ ಮತ್ತು ಹೂಡಿಕೆ ಮಾಡುವ ಬಡವರು ತಮ್ಮ ಹಣವನ್ನು ಕಳೆದುಕೊಳ್ಳುತ್ತಾರೆ. ಪ್ರಸ್ತುತ ಕಾಲದಲ್ಲಿ ಅನೇಕ ಬಿಲಿಯನ್‌ಡಾಲರ್‌ಗಳನ್ನು ಕಳೆದುಕೊಂಡಿರುವ ಸಿದ್ಧಿ ಇದೆ ಅವರು ತಮ್ಮ ಹಣವನ್ನು ಬಿಟ್‌ಕೈನ್ ಪಡೆದು ಕ್ರಿಪ್ಟೋಕರೆನ್ಸಿಯಲ್ಲಿ ಹೂಡಿಕೆ ಮಾಡಿದ್ದರು. ಅದರ ಸಂಚಾಲಕರು ತಿಂದುಬಿಟ್ಟರು. ಎಲ್ಲವೂ ಮುಗಿಯಿತು. ಆದರೆ, ಬಿಟ್‌ಕೈಯಿನ್ ಇತ್ಯಾದಿಗಳ ಈ ವ್ಯವಹಾರವೂ ನನ್ನ ಪ್ರಕಾರ ಒಂದು ರೀತಿಯ ಜೂಜಾಟವಾಗಿದೆ.

ಆದರೆ ಸರ್ವಶಕ್ತನಾದ ಅಲ್ಲಾಹನು ತನ್ನ ಸಲುವಾಗಿ ತ್ಯಾಗ ಮಾಡುವವರನ್ನು ಹೇಗೆ ಅನುಗ್ರಹಿಸುತ್ತಾನೆ ಎಂಬ ವಿಚಿತ್ರ ದರ್ಶನಗಳಿವೆ. ನಾನು ಹೇಳಿದಂತೆ ನಾನು ಕೆಲವು ಉದಾಹರಣೆಗಳನ್ನು ನೀಡುತ್ತೇನೆ. ತ್ಯಾಗ ಮಾಡುವವರು ಪ್ರಾಪಂಚಿಕ ಲಾಭವನ್ನು ಅನುಭವಿಸುತ್ತಿರುವ ಉದಾಹರಣೆಗಳಿವೆ ಮತ್ತು ಅವರ ನಂಬಿಕೆಯೂ ವರ್ಧಿಸುತ್ತಿದೆ. ಉದಾಹರಣೆಗೆ, ಲೈಬೀರಿಯಾ ಒಂದು ಉದಾಹರಣೆ ಇದೆ. ಬೂಮಿ ಕೌಂಟಿ ಇದೆ. ಅಲ್ಲಿನ ಮುಅಲ್ಲಿಮ್ ಸಾಹೆಬರು ಹೇಳುತ್ತಾರೆ ವಖ್ಫೆ ಜದೀದ್‌ನ ವಸೂಲಿಗಾಗಿ ಒಂದು ನವ ಅಹ್ಮದೀಯರ ಜಮಾಅತ್ ಫೋಂಬಿಯಾಗೆ ಹೋದೆವು. ಅಲ್ಲಿನ ಸ್ಥಳೀಯ ಇಮಾಮ್ ಸಾಹಿಬ್ ಅವರನ್ನು ಭೇಟಿಯಾದ ನಂತರ ಸಾಮೂಹಿಕ ಕಾರ್ಯಕ್ರಮವನ್ನು ಆಯೋಜಿಸಲಾಯಿತು. ಅದರಲ್ಲಿ ಗ್ರಾಮದ ಬಹುತೇಕ ಜನರು ಭಾಗವಹಿಸಿದ್ದರು. ವಖ್ಫೆ ಜದೀದ್‌ನ ಮಹತ್ವ ಮತ್ತು ಅದರ ಅನುಗ್ರಹಗಳ ಬಗ್ಗೆ ಸ್ನೇಹಿತರಿಗೆ ತಿಳಿಸಲಾಯಿತು. ಕಾರ್ಯಕ್ರಮದ ನಂತರ ಸ್ನೇಹಿತರನ್ನು ಅವರ ಮನೆಗೆ ಪ್ರತ್ಯೇಕವಾಗಿ ಭೇಟಿ ಮಾಡಿದರು. ಅಷ್ಟರಲ್ಲಿ ಓರ್ವ ಖಾದಿಮ್ ತನ್ನ ಮನೆಗೆ ಹೋದರು. ಅವರ ಮನೆಯಲ್ಲಿ ಏನೂ ಇರಲಿಲ್ಲ. ಚಂದ ನೀಡಲು ಅವರ ಬಳಿ ಹಣವಿರಲಿಲ್ಲ, ಆದರೆ ಸ್ವಲ್ಪ ಸಮಯದ ನಂತರ ನೀಡುತ್ತೇನೆ ಎಂದು ಅವರ ತಾಯಿ ಕ್ಷಮೆಯಾಚಿಸಿದರು. ಅವರು ಹೇಳುತ್ತಾರೆ ತದನಂತರ ನಾವು ಹಿಂತಿರುಗಿದೆವು. ಸ್ವಲ್ಪ ಸಮಯದ ನಂತರ, ಆ ಖಾದಿಮ್ ಓಡಿ ಬಂದು, ಇದು ನನ್ನ ತಂದೆ ನನಗೆ ಶಾಲಾ ಶುಲ್ಕಕ್ಕಾಗಿ ನೀಡಿದ ಇನ್ನೂರೈವತ್ತು ಲೈಬೀರಿಯನ್ ಡಾಲರ್ ಆಗಿದೆ ಎಂದು ಹೇಳಿ ಇದು ನಾನು ಚಂದದಲ್ಲಿ ನೀಡುತ್ತೇನೆ ಎಂದು ಚಂದದಲ್ಲಿ ಆ ಮೊತ್ತವನ್ನು ನೀಡಿದರು. ಕೆಲವು ದಿನಗಳ ನಂತರ, ಅದೇ ಖಾದಿಮ್ ನನ್ನ ಕೇಂದ್ರಕ್ಕೆ ಬಂದು, ನೀವು ಹೋದ ಎರಡು ದಿನಗಳ ನಂತರ, ನನ್ನ ಸಂಬಂಧಿಯೊಬ್ಬರು ನನ್ನ ಶಾಲೆಯ ಅಗತ್ಯಗಳಿಗಾಗಿ ಇಪ್ಪತ್ತೈದು ನೂರು ಲೈಬೀರಿಯನ್ ಡಾಲರ್‌ಗಳನ್ನು ಕಳುಹಿಸಿದ್ದಾರೆ ಎಂದು ನನಗೆ ಸಂದೇಶ ಬಂದಿದೆ ಎಂದು ಹೇಳಿದರು. ಹಾಗಾಗಿ ನಾನು ಆ ಹಣದಿಂದ ನನ್ನ ಶಾಲಾ ಶುಲ್ಕವನ್ನು ಪಾವತಿಸಿದೆ ಮತ್ತು ಇತರ ಅಗತ್ಯ ವಸ್ತುಗಳನ್ನು ಖರೀದಿಸಿದೆ. ಅಲ್ಲಾಹನು ನನ್ನ ತ್ಯಾಗಕ್ಕಿಂತ ಹತ್ತು ಪಟ್ಟು ಹೆಚ್ಚು ಅನುಗ್ರಹಿಸಿದ್ದಾನೆ ಎಂದು ಹೇಳಿದರು.

ಹೀಗೆ, ಈ ರೀತಿಯಾಗಿ, ಅಲ್ಲಾಹನು ಹೃದಯದಲ್ಲಿ ನಂಬಿಕೆ ಮತ್ತು ವಿಶ್ವಾಸವನ್ನು ಸೃಷ್ಟಿಸುತ್ತಾನೆ ಮತ್ತು ಇಲ್ಲಿ ಅನುಗ್ರಹಿಸುವ ಸರ್ವಶಕ್ತನಾದ ಅಲ್ಲಾಹನು ಪರಲೋಕದ ವಾಗ್ದಾನಗಳನ್ನು ಸಹ ಇನ್‌ಶಾಅಲ್ಲಾಹ್ ಪೂರೈಸುತ್ತಾನೆ.

ನಂತರ ಗಿನಿ ಕೊನಾಕರಿಯ ಉದಾಹರಣೆ ಇದೆ. ಈ ಪ್ರದೇಶದ ಜಮಾಅತ್‌ಗಳಲ್ಲಿ ಒಂದು ಮನ್ನಯಾ ಜಮಾಅತ್ ಇದೆ. ಅಲ್ಲಿನ ಓರ್ವ ಮಿಷನರಿ ಹೇಳುತ್ತಾರೆ ಅಶ್ರಃ ವಖ್ಫೆ ಜದೀದ್ ಆಚರಿಸಲಾಗುತ್ತಿತ್ತು. ಜಮಾಅತ್ತಿನ ಸ್ನೇಹಿತರಿಗೆ ಚಂದಾ ವಖ್ಫೆ ಜದೀದ್‌ನ ಮಹತ್ವ ಮತ್ತು ಅನುಗ್ರಹವನ್ನು ಕುರಿತು ಮಸೀದಿಯಲ್ಲಿ ಹಾಗೂ ವೈಯಕ್ತಿಕವಾಗಿ ತಿಳಿಸಲಾಯಿತು. ಮತ್ತು ಈ ಅನುಗ್ರಹಕದಾಯಕ ಚಳುವಳಿಯಲ್ಲಿ ಭಾಗವಹಿಸಲು ಗಮನಸೆಳೆಯಲಾಯಿತು. ಅಷ್ಟರಲ್ಲಿ ಮಸೀದಿಯ ಇಮಾಮ್ ಅಬೂಬಕರ್ ಕಮಾರ್ ಸಹೇಬರು ಅವರು ಈಗಷ್ಟೆ ಅಹ್ಮದೀ ಆಗಿದ್ದರು ಅವರು ಹೇಳಿದರು ಮೊದಲು ನಾನು ಚಂದವನ್ನು ನೀಡುತ್ತೇನೆ ಏಕೆಂದರೆ ನಾವು ಇತರರಿಗೆ ಮಾದರಿಯಾಗಬೇಕು.

ಈಗ ಈ ಪರಿಸ್ಥಿತಿಯಾಗಿದೆ. ಈ ತೆಹ್ರೀಕ್‌ನಲ್ಲಿ ಸ್ವತಃ ಭಾಗವಹಿಸದೆ ಇತರರಿಗೆ ಭಾಗವಹಿಸಲು ಹೇಳುವುದಲ್ಲ ಬದಲಿಗೆ ಅವರು ಸ್ವತಃ ಹೇಳುತ್ತಾರೆ ಮೊದಲು ನಮಗೆ ಈ ತೆಹ್ರೀಕ್‌ನಲ್ಲಿ ಭಾಗವಹಿಸಬೇಕು. ಹೀಗಾಗಿ ಅವರು ತಮ್ಮ ಜೇಬಿನಲ್ಲಿದ್ದ ಹತ್ತು ಸಾವಿರ ಫ್ರಾಂಕ್‌ಗಳನ್ನು ಚಂದದಲ್ಲಿ ಪಾವತಿಸಿದರು ಮತ್ತು ನಂತರ ಇವರು ಅವರನ್ನು ಭೇಟಿಯಾಗಲು ಬಂದು ಹೇಳಿದರು ಅವರು ಚಂದ ನಿಡಿದ್ದಾರೆ ಆದರೆ ಸ್ವಲ್ಪ ಸಮಯದ ನಂತರ ನನ್ನ ಸ್ನೇಹಿತ ನನಗೆ ಹದಿನೈದು ಲಕ್ಷ ಫ್ರಾಂಕ್‌ಗಳನ್ನು ಉಡುಗೊರೆಯಾಗಿ ನೀಡಿದ್ದಾರೆ. ಸರ್ವಶಕ್ತನಾದ ಅಲ್ಲಾಹನು ನನಗೆ ನೀಡಿದ ನನ್ನ ಈ ತ್ಯಾಗದ ಪ್ರತಿಫಲ ಎಂದು ನಾನು ಭಾವಿಸುತ್ತೇನೆ. ಅವರು ಹೇಳುತ್ತಾರೆ ಈಗ ನಾನು ಮೊದಲಿಗಿಂತ ಹೆಚ್ಚು ನಿಯಮಿತವಾಗಿ ಚಂದವನ್ನು ನೀಡುತ್ತೇನೆ. ಇದು ಸರ್ವಶಕ್ತನಾದ ಅಲ್ಲಾಹನ ವರ್ತನೆಯಾಗಿದೆ ಅಮದರೆ ನೀವು ನನ್ನ ಮಾರ್ಗದಲ್ಲಿ ಖರ್ಚು ಮಾಡಿದರೆ ನಾನು ಇಲ್ಲಿಯೂ ಅನುಗ್ರಹಿಸುತ್ತೇನೆ

ಮತ್ತು ಭವಿಷ್ಯದ ವಾಗ್ದಾನಗಳು ಇನ್‌ಶಾಅಲ್ಲಾಹ್ ಈಡೇರುತ್ತವೆ.

ನಂತರ ಕ್ಯಾಮರೂನ್‌ನ ಮುಅಲ್ಲಿಮ್ ಸಾಹೇಬರು ಬರೆಯುತಾರೆ ಓರ್ವ ಯುವಕ ನನ್ನೊಂದಿಗೆ ತೆಹ್ರೀಕೆ ಜದೀದ್‌ನ ಚಂದವನ್ನು ಸಂಗ್ರಹಿಸಲು ಒಬ್ಬ ಹಳ್ಳಿಗಳಿಗೆ ಹೋಗುತ್ತಿದ್ದೆವು. ಅವರು ನಿರುದ್ಯೋಗಿಯಾಗಿದ್ದರು, ಆದ್ದರಿಂದ ಅವರೇ 1000 ಸೈಫಾವನ್ನು ತೆಹ್ರೀಕ್-ಎ-ಜದೀದ್‌ನ ಚಂದದಲ್ಲಿ ನೀಡಿದ್ದರು ಮತ್ತು ನನಗೆ ಕೆಲಸ ಸಿಕ್ಕರೆ ನಾನು ಹೆಚ್ಚಾಗಿ ಪಾವತಿಸುತ್ತೇನೆ ನನಗಾಗಿ ಪ್ರಾರ್ಥಿಸಿರಿ ಎಂದು ಹೇಳಿದರು. ಮುಅಲ್ಲಿಮ್ ಸಾಹೇಬರು ಸರಿ ನಾನು ಕೂಡ ದುಆ ಮಾಡುತ್ತೇನೆ ಎಂದು ಹೇಳಿದರು. ನಿಮ್ಮ ಕೆಲಸಕ್ಕಾಗಿ ನೀವು ಪ್ರಾರ್ಥಿಸುತ್ತಿರಿ. ಸ್ವಲ್ಪ ಸಮಯದ ನಂತರ ಅಲ್ಲಾಹನು ಅವರ ಪ್ರಾರ್ಥನೆಯನ್ನು ಸ್ವೀಕರಿಸಿದನು. ಒಂದು ತಿಂಗಳ ನಂತರ, ಅವರಿಗೆ ಯುಎನ್‌ಒ ಸಂಸ್ಥೆಯಲ್ಲಿ ಡ್ರೈವರ್ ಕೆಲಸ ಸಿಕ್ಕಿತು. ಹೀಗೆ ಅವರು ವಖ್ಫೆ ಜದೀದ್‌ನ ವಾಗ್ದಾನದಲ್ಲಿ ಹತ್ತು ಸಾವಿರ ಸೈಫಾ ಚಂದದಲ್ಲಿ ಪಾವತಿಸಿದರು. ನಾನು ಕಷ್ಟದ ಸಂದರ್ಭಗಳಲ್ಲಿ ಕೊಟ್ಟಾಗ, ಸರ್ವಶಕ್ತನಾದ ಅಲ್ಲಾಹನು ನನಗೆ ಪ್ರತಿಯಾಗಿ ನನ್ನ ಆದಾಯದಲ್ಲಿ ಹೆಚ್ಚಾಗಿ ನೀಡಿದನು.

ತಾಂಜಾನಿಯಾದ ಅಮೀರ್ ಸಾಹಿಬ್ ಬರೆಯುತ್ತಾರೆ. ಒಂದು ಜಮಾಅತ್ತಿನ ಮಹಿಳೆಯೊಬ್ಬಳು ಹೇಳಿದಳು ಒಂದು ದಿನ ಅವಳು ಮನೆ ಖರೀದಿಸಲು ಮಾರುಕಟ್ಟೆಗೆ ಹೋಗುತ್ತಿದ್ದೆ. ದಾರಿಯಲ್ಲಿ ನಾನು ಮುಅಲ್ಲಿಮ್ ಸಾಹೇಬರನ್ನು ಭೇಟಿಯಾದೆ. ಅವಳು ಚಂದಾ ವಖ್ಫೆ ಜದೀದ್ ಬಗ್ಗೆ ಹೇಳಿದರು ಮತ್ತು ಅದರ ಪಾವತಿಯತ್ತ ಗಮನ ಸೆಳೆದರು. ಅವಳು ಹೇಳುತ್ತಾಳೆ, ಈ ಸಮಯದಲ್ಲಿ ನನ್ನ ಬಳಿ ಎರಡು ಸಾವಿರ ಶಿಲ್ಲಿಂಗ್ ಇದೆ ಎಂದು ನಾನು ಅವರಿಗೆ ಹೇಳಿದೆ. ನಾನು ಮಾರುಕಟ್ಟೆಯಿಂದ ಮನೆಯ ಸಾಮಗ್ರಿಗಳನ್ನು ಖರೀದಿಸಲು ಹೋಗುತ್ತಿದ್ದೇನೆ ನಾನು ಒಂದು ಸಾವಿರ ಶಿಲ್ಲಿಂಗ್‌ಗಳನ್ನು ಚಂದದಲ್ಲಿ ಪಾವತಿಸಿದೆ ಮತ್ತು ಉಳಿದ ಒಂದು ಸಾವಿರಕ್ಕೆ ನನ್ನ ಸರಕುಗಳನ್ನು ಖರೀದಿಸಿದೆ. ಅವಳು ಹೇಳುತ್ತಾಳೆ ಸ್ವಲ್ಪ ಸಮಯದ ನಂತರ ನನ್ನಿಂದ ಐದು ಸಾವಿರ ಶಿಲ್ಲಿಂಗ್‌ಗಳನ್ನು ತೆಗೆದುಕೊಂಡಿದ್ದ ಮಹಿಳೆಯೊಬ್ಬರು ನನ್ನನ್ನು ಹಿಂದಿನಿಂದ ಕರೆದರು ಮತ್ತು ಬಹಳ ಸಮಯ ಕಳೆದುಹೋಗಿತ್ತು, ಅದು ನನಗೆ ಹಿಂತಿರುಗುವ ಭರವಸೆಯೂ ಇರಲಿಲ್ಲ. ನಿನ್ನ ಸಾಲವೇ ನಾನು ತೀರಿಸಬೇಕಾಗಿದೆ ಎಂದು ಮಹಿಳೆ ಕೂಗುತ್ತಾ ಐದು ಸಾವಿರ ಶಿಲ್ಲಿಂಗ್ ನೀಡಿದಳು. ನಂತರ ಅವಳು ಮತ್ತೆ ಮುಅಲ್ಲಿಮ್ ಸಾಹೇಬರ ಬಳಿಗೆ ಬಂದು ಚಂದದ ಅನುಗ್ರಹದ ಮೂಲಕ ಸರ್ವಶಕ್ತನಾದ ಅಲ್ಲಾಹನು ನನಗೆ ಇದನ್ನು ನೀಡಿದನು ಎಂದು ಹೇಳಿದಳು, ಆದ್ದರಿಂದ ಅವಳು ಇನ್ನೂ ಒಂದು ಸಾವಿರ ಶಿಲ್ಲಿಂಗ್ಗಳನ್ನು ಚಂದದಲ್ಲಿ ಪಾವತಿಸಿದಳು.

ಲೈಬೇರಿಯಾದ ಓರ್ವ ಮುಅಲ್ಲಿಮ್ ಸಾಹೇಬರು ಹೇಳುತ್ತಾರೆ: ಅಲ್ಲಿ ಗಂಟಾ ಎಂಬ ಸ್ಥಳದ ಜಮಾಅತ್ ಇದೆ. ಅಲ್ಲಿ ಓರ್ವ ಆಯಿಷಾ ಎಂಬವರಿದ್ದಾರೆ. ಅವರ ಮನೆಗೆ ಹೋದರು. ವಖ್ಫೆ ಜದೀದ್‌ನ ತೆಹ್ರೀಕ್‌ನಲ್ಲಿ ಭಾಗವಹಿಸಲು ಗಮನ ಸೆಳೆಯಲಾಯಿತು. ಅದಕ್ಕೆ ಅವರು ಹೇಳಿದರು ಈ ಸಮಯದಲ್ಲಿ ನನ್ನ ಬಳಿ ಏನೂ ಇಲ್ಲ, ಆದರೆ ನೀವು ಸ್ವಲ್ಪ ಸಮಯ ತಡೆಯಿರಿ ನೀವು ನನ್ನ ಮನೆಯಿಂದ ಖಾಲಿ ಕೈ ಹೋಗಬಾರದಂತೆ ನಾನು ಏನಾದರೂ ವ್ಯವಸ್ಥೆ ಮಾಡುತ್ತೇನೆ. ಯಾರೂ ಬರಿಗೈಯಲ್ಲಿ ಹೋಗಬಾರದು ಎಂಬ ಆತಂಕವೂ ಅವರಿಗೆ ಇದೆ. ಆದ್ದರಿಂದ ಅವರು ಬೇಗನೆ ಯಾರೊಬ್ಬರಿಂದ ನೂರು ಲೈಬೇರಿಯನ್ ಡಾಲರ್ ಹಣವನ್ನು ಸಾಲ ಪಡೆದು ಚಂದ ನೀಡಿದರು. ಮುಅಲ್ಲಿಮ್ ಸಾಹೇಬ್ ಹೇಳುತ್ತಾರೆ ಇನ್ನೂ ನಾನು ಅವರ ಮನೆಯಲ್ಲಿಯೇ ಕುಳಿತಿದ್ದೆ ಅಷ್ಟರಲ್ಲಿ ಆ ಮಹಿಳೆಯ ಫೋನ್‌ಗೆ ಆನ್‌ಲೈನ್‌ನಲ್ಲಿ ಯಾರೋ ಅವರ ಖಾತೆಗೆ ಸ್ವಲ್ಪ ಹಣವನ್ನು ವರ್ಗಾಯಿಸಿದ್ದಾರೆ ಎಂದು ಮಹಿಳೆ ಫೋನ್‌ಗೆ ಸಂದೇಶವನ್ನು ಸ್ವೀಕರಿಸಿದರು. ಅದಕ್ಕೆ ಆ ಮಹಿಳೆ ಹೇಳುತ್ತಾರೆ: ನಾನು ನೂರು ಲೈಬೇರಿಯನ್ ಡಾಲರ್‌ಗಳನ್ನು ಚಂದದಲ್ಲಿ ನೀಡಿದ್ದರಿಂದ ಅದರ ಬದಲಿಗೆ ಸರ್ವಶಕ್ತನಾದ ಅಲ್ಲಾಹನು ತಕ್ಷಣ ನನ್ನನ್ನು ಹಿಂದಿರುಗಿಸಿದನು.

ಮತ್ತೆ ಗಿನಿಕೆನಾಕರಿಯ ಮುಬಲ್ಲಿಗ್ ಸಾಹೇಬರು ಬರೆಯುತ್ತಾರೆ ಜಮಾಅತ್ತಿನ ಸದಸ್ಯರಲ್ಲಿ ಒಬ್ಬರು ಸೈದೌಬಾ ಸಾಹಿಬ್ ಇದ್ದಾರೆ. ಅವರು ನಿರುದ್ಯೋಗಿಯಾಗಿದ್ದರು ಮತ್ತು ಗಣಿಗಾರಿಕೆಯ ಕಂಪನಿಗಳಿಗೆ ಅರ್ಜಿ ಸಲ್ಲಿಸಿದ್ದರು ಆದರೆ ಯಾವುದೇ ಭರವಸೆ ಇರಲಿಲ್ಲ. ವಖ್ಫೆ ಜದೀದ್‌ನ ಅಶರಃದಲ್ಲಿ ಅವರಿಗೆ ಚಂದದ ಪಾವತಿಯತ್ತ ಗಮನ ಸೆಳೆಯಲ್ಪಟ್ಟಾಗ, "ನಾನು ನಿರುದ್ಯೋಗಿಯಾಗಿದ್ದೇನೆ ಮತ್ತು ಹೆಚ್ಚಿನದನ್ನು ನೀಡಲು ಸಾಧ್ಯವಿಲ್ಲ" ಎಂದು ಹೇಳಿದರು. ಆದರೂ ಜೇಬಿಗೆ ಕೈ ಹಾಕಿ ಐದು ಸಾವಿರ ಫ್ರಾಂಕ್ ತೆಗೆದು ಚಂದ ನೀಡಿದರು, ಆ ಸಮಯದಲ್ಲಿ ಅವರ ಬಳಿ ಇರುವ ಒಟ್ಟು ಮೊತ್ತವಾಗಿತ್ತು. ಚಂದ ಪಾವತಿಸಿದ ಐದು ದಿನಗಳ ನಂತರ, ಅವರು ಅರ್ಜಿ ಸಲ್ಲಿಸದ ಮತ್ತೊಂದು ಗಣಿ ಕಂಪನಿಯಿಂದ ಕೆಲಸ ನೀಡಲಾಯಿತು ಮತ್ತು ಸರ್ವಶಕ್ತನಾದ ಅಲ್ಲಾಹನ ಅನುಗ್ರಹದಿಂದ ಮಾಸಿಕ 500,000 ಫ್ರಾಂಕ್ ಸಂಬಳದಲ್ಲಿ ಕೆಲಸ ಸಿಕ್ಕಿತು ಎಂದು ತಿಳಿಸಿದರು. ಸರ್ವಶಕ್ತನಾದ ಅಲ್ಲಾಹನ ಮಾರ್ಗದಲ್ಲಿ ನಾನು ಸಣ್ಣ ತ್ಯಾಗವನ್ನು ನೀಡಿದ್ದೇನೆ, ಸರ್ವಶಕ್ತನಾದ ಅಲ್ಲಾಹನು ತನ್ನ ವಾಗ್ದಾನದಂತೆ ಅದನ್ನು ಅನೇಕ ಪಟ್ಟು ಹೆಚ್ಚಿಸಿ ನನಗೆ ಕೊಟ್ಟಿದ್ದಾನೆ ಎಂದು ಅವರು ಹೇಳುತ್ತಾರೆ.

ಅದೇ ರೀತಿ ನೈಜೀರಿಯಾದ ಮುಬಲ್ಲಿಗ್ ಸಾಹೇಬರು ಬರೆಯುತ್ತಾರೆ. ಕಾನೋ ರಾಜ್ಯದ ಅಹ್ಮದಿ ಗೆಳೆಯ ನಾಸಿರ್ ಸಾಹಿಬ್ ಇದ್ದಾರೆ. ಮೂರು ವರ್ಷಗಳಿಂದ ಕೆಲಸವಿಲ್ಲದೆ ತೊಂದರೆಯಲ್ಲಿದ್ದೇನೆ. ನನ್ನ ಸಾಮರ್ಥ್ಯಕ್ಕನುಗುಣವಾಗಿ ಮತ್ತೆ ಏಕೆ ದಾನ ಮಾಡಬಾರದು ಎಂದು ಯೋಚಿಸಿದೆ. ಕೆಲಸವಿಲ್ಲದಿದ್ದರಿಂದ ಚಂದವನ್ನು ಸಹ ನಿಲ್ಲಿಸಿದ್ದರು. ಅವರ ಬಳಿ ಇದ್ದಷ್ಟರಲ್ಲಿ ಚಂದ ನೀಡಲು ಪ್ರಾರಂಭಿಸಿದರು. ಮುರಬ್ಬಿ ಸಾಹೇಬ್ ಹೇಳುತ್ತಾರೆ: ಅವರು ಕಳೆದ ವರ್ಷ ಜೂನ್ ತಿಂಗಳಿನಿಂದ ಚಂದ ನೀಡಲು ಪ್ರಾರಂಭಿಸಿದರು ಮತ್ತು ಅವರು ಮುರಬ್ಬಿ ಸಾಹಿಬ್‌ಗೆ ಹೇಳುತ್ತಿದ್ದಾರೆ. ಇನ್ನು ಮೂರು ತಿಂಗಳು ಕಳೆದಿರಲಿಲ್ಲ ಕಂಪನಿಯೊಂದಕ್ಕೆ ಮಾರ್ಕೆಟಿಂಗ್‌ಗೆ ಖಾಲಿ ಹುದ್ದೆ ಇದೆ ಎಂದು ಸ್ನೇಹಿತರೊಬ್ಬರು ನನ್ನನ್ನು ಸಂಪರ್ಕಿಸಿದ್ದು ಹೀಗೆ ಈ ಕಂಪನಿಯು ನನ್ನನ್ನು ನೇಮಿಸಿಕೊಂಡಿದೆ ಮತ್ತು ಇದು ಈ ಕಂಪನಿಗೆ ಈ ರೀತಿಯ ಮೊದಲ ಒಪ್ಪಂದವಾಗಿದೆ ಎಂದು ಹೇಳಲಾಗುತ್ತದೆ. ಇಷ್ಟು ದಿನಗಳ ನಂತರ ನನಗೆ ಕೆಲಸ ಸಿಕ್ಕಿತು ಅಥವಾ ವ್ಯಾಪಾರ ಅಥವಾ ಕೆಲಸ ಸಿಕ್ಕಿತು ಎಂಬುದು ಈ ಚಂದದ ಅನುಗ್ರಹವಾಗಿದೆ ಎಂದು ಮನವರಿಕೆಯಾಗಿದೆ ಎನ್ನುತ್ತಾರೆ.

ಮತ್ತೆ ಮಧ್ಯ ಆಫ್ರಿಕಾದ ಮುಬಲ್ಲಿಗ್ ಸಾಹೇಬ್ ಬರೆಯುತ್ತಾರೆ, ಜಿಬ್ರೀಲ್ ಸಾಹಿಬ್ ಓರ್ವ ನವ ಅಹ್ಮದಿ ಆಗಿದ್ದಾರೆ ಅವರು ಹೇಳುತ್ತಾರೆ ನಾನು ಕಳೆದ ವರ್ಷ ಜಮಾಅತ್ತನ್ನು ಪ್ರವೇಶಿಸಿದಾಗ, ನನ್ನ ನೈತಿಕ ಮತ್ತು ಆಧ್ಯಾತ್ಮಿಕ ಸ್ಥಿತಿಯು ಬದಲಾಗಲಾರಂಭಿಸಿತು. ಅವರು ಕೇವಲ ಜಮಾಅತ್‌ಗೆ ಸೇರಲಿಲ್ಲ, ಆದರೆ ಅವರು ನಿಸ್ಸಂದೇಹವಾಗಿಯೂ ದುಆ ಮಾಡಿರಬೇಕು ಮತ್ತು ತಮ್ಮ ಪರಿಸ್ಥಿತಿಯನ್ನು ಬದಲಾಯಿಸಲು ಪ್ರಯತ್ನಿಸಿರಬೇಕು ಮತ್ತು ಅಲ್ಲಾಹನ ಅನುಗ್ರಹವು ಅವರ ಮೇಲಿತ್ತು, ನನ್ನ ಆಧ್ಯಾತ್ಮಿಕ ಮತ್ತು ನೈತಿಕ ಪರಿಸ್ಥಿತಿ ಬದಲಾಗುತ್ತಿದೆ ಎಂದು ಅವರು ಭಾವಿಸಿದರು. ಆಗ ಅವರು ಒಂದು ದಿನ ಮುಬಲ್ಲಿಗ್ ಸಾಹೇಬರು ವಖ್ಫೆ ಜದೀದ್‌ನ ಚಂದದಲ್ಲಿ ಬಗ್ಗೆ ಹೇಳಿದರು, ಈಗ ವರ್ಷವು ಮುಗಿಯುತ್ತಿದೆ ಮತ್ತು ಚಂದವು ಸ್ವಲ್ಪ ನೀಡಬೇಕು ಎಂದು ಹೇಳಿದರು. ಅದಕ್ಕೆ ನಾನು ಚಂದ ನೀಡಿ ಅದರ ರಸೀದಿಯನ್ನು ಪಡೆದುಕೊಂಡೆ ಮತ್ತು ಅಂದಿನಿಂದ ಇಂದಿನವರೆಗೆ ನನ್ನ ಕೆಲಸದಲ್ಲಿ ಬಹಳ ಅನುಗ್ರಹವನ್ನು ಪಡೆದಿದ್ದೇನೆ. ದೇವರ ವಿಶೇಷ ಕೃಪೆಯಾಗಿದೆ. ಈಗ ನಾನು ಕೆಲಸದಿಂದ ಆರಾಮಾಗಿ ಕುಳಿತುಕೊಳ್ಳುವುದಿಲ್ಲ. ಈ ಹಿಂದೆ ಗ್ರಾಹಕರು ಬಹಳ ದಿನ ಬರುತ್ತಿರಲಿಲ್ಲ, ಈಗ ದಿನನಿತ್ಯ ಬರುತ್ತಿದ್ದು ಅಲ್ಲಾಹನ ಕೃಪೆಯಿಂದ ನಾನು ಹಿಂದೆಂದೂ ಊಹಿಸಿರದಂತಹ ಉತ್ತಮ ಮೊತ್ತವನ್ನು ಗಳಿಸುತ್ತಿದ್ದೇನೆ.

ಮತ್ತೆ ಟೋಗೋವಿನ ಮುಬಲ್ಲಿಗ್ ಸಾಹೇಬರು ಬರೆಯುತ್ತಾರೆ: ಕಾರಾ ಪ್ರದೇಶದಲ್ಲಿ ಅಬಾಗಾಜಿ ಸಾಹಬ್ ಇದ್ದಾರೆ. ನನ್ನ ಆರ್ಥಿಕ ಪರಿಸ್ಥಿತಿ ಚೆನ್ನಾಗಿರಲಿಲ್ಲ ಎನ್ನುತ್ತಾರೆ ಅವರು. ವಖ್ಫೆ ಜದೀದ್‌ನ ಕೊನೆಯ ತಿಂಗಳು ನಡೆಯುತ್ತಿತ್ತು. ವಾಗ್ದಾನವನ್ನು ಈಡೇರಿಸುವುದು ಹೇಗೆ ಎಂಬ ಚಿಂತೆ ಕಾಡುತ್ತಿತ್ತು. ಆಗ ನನ್ನ ಮನಸ್ಸಿನಲ್ಲಿ ಒಂದು ಉಪಾಯ ಹೊಳೆಯಿತು, ನಾನು ಬೇರೆ ಉದ್ದೇಶಕ್ಕಾಗಿ ಇಟ್ಟುಕೊಂಡಿರುವ ಮನೆಯಲ್ಲಿ ಒಂದು ಚಿಕ್ಕ ಮೇಕೆ ಇದೆ, ಅದನ್ನು ಮಾರಿ ಚಂದ ಪಾವತಿಸುತ್ತೇನೆ. ಮನೆಯಲ್ಲಿ ಒಂದೇ ಒಂದು ವಸ್ತುವಿದೆ ಮತ್ತು ಬೇರೇನೂ ಇಲ್ಲ. ನಾನು ಅದನ್ನೇ ಮಾರಿ ಪಾವತಿಸುತ್ತೇನೆ. ನಾನು ಇನ್ನು ಉದ್ದೇಸಿಸಿದ್ದೆ ಅಷ್ಟರಲ್ಲಿ ಒಂದು ದಿನ ಮಿಷನರಿ ಸಾಹಿಬ್ ಚಂದ ಸಂಗ್ರಹಿಸಲು ಆಗಮಿಸಿದರು. ಅದೇ ದಿನ ವ್ಯಕ್ತಿಯೊಬ್ಬರು ನನ್ನ ಬಳಿ ಸಾಲ ಮಾಡಿಕೊಂಡಿದ್ದು, ಹಿಂದಿರುಗಿಸುವ ಭರವಸೆ ಇರಲಿಲ್ಲ. ಅವರು ಕೂಡ ಅದೇ ಸಮಯಕ್ಕೆ ಹಣ ಹಿಂತಿರುಗಿಸಲು ಬಂದಿದ್ದರು. ಹಾಗಾಗಿ ನಾನು ವಖ್ಫೆ ಜದೀದ್‌ನಲ್ಲಿ ಎಲ್ಲಾ ಹಣವನ್ನು ಪಾವತಿಸಿದೆ. ಈ ರೀತಿ, ಸರ್ವಶಕ್ತನಾದ ಅಲ್ಲಾಹನು ನನಗೆ ಅದೃಶ್ಯದಿಂದ ಸಹಾಯ ಮಾಡಿದನು.

ಅವರು ಒಳ್ಳೆಯದನ್ನು ಮಾಡಲು ಉದ್ದೇಶಿಸಿದ್ದರು, ಮತ್ತು ಅದರ ಅನುಷ್ಠಾನದ ಮೊದಲು, ಸರ್ವಶಕ್ತನಾದ ಅಲ್ಲಾಹನು ಕೂಡ ಅದನ್ನು ಏರ್ಪಡಿಸಿದನು. ನೀವು ಪ್ರೀತಿಯ ವಸ್ತುವನ್ನು ತ್ಯಾಗ ಮಾಡುವುದರತ್ತ ಗಮನಹರಿಸಿದರೆ, ಸರ್ವಸಕ್ತನಾದ ಅಲ್ಲಾಹನು ಅದನ್ನು ಈಗಾಗಲೇ ಅನುಗ್ರಹಿಸಿದ್ದಾನೆ ಏಕೆಂದರೆ ಅವನು ಹೃದಯಗಳ ಸ್ಥಿತಿಯನ್ನು ತಿಳಿದಿದ್ದಾನೆ.

ಮಾರ್ಷಲ್ ಐಲ್ಯಾಂಡ್‌ನ ಸಾಜಿದ್ ಇಕ್ಬಾಲ್ ಸಾಹಿಬ್ ಹೇಳುತ್ತಾರೆ ಇಲ್ಲಿ ಲೋರೀನ್ ಎಂಬ ಮಹಿಳೆ ಇದ್ದಾರೆ. ಅವರು ಹೇಳುತ್ತಾರೆ ಆರ್ಥಿಕ ತ್ಯಾಗದಿಂದಾಗಿ ಅಲ್ಲಾಹನು ನನಗೆ ಮತ್ತು ನನ್ನ ಕುಟುಂಬಕ್ಕೆ ಸಾಕಷ್ಟು ಅನುಗ್ರಹವನ್ನು ನೀಡಿದ್ದಾನೆ. ತ್ಯಾಗಕ್ಕೆ ಪ್ರತಿಯಾಗಿ ಅಲ್ಲಾಹನು ಅವರನ್ನು ಎಷ್ಟು ಅನುಗ್ರಹಿಸುತ್ತಾನೆ ಎಂದು ಖಚಿತವಾಗಿ ತಿಳಿದಿಲ್ಲದ ಕಾರಣ ಮತ್ತು ಆ ಸಮಯದಲ್ಲಿ ಹಣದ ಕೊರತೆಯಿದ್ದ ಕಾರಣ ಅವರು ಹಿಂದೆ ಆರ್ಥಿಕ ತ್ಯಾಗದಲ್ಲಿ ಭಾಗವಹಿಸಲಿಲ್ಲ. ಊಟ-ತಿಂಡಿ ಕೊಳ್ಳಲು ಹಣವಿರಲಿಲ್ಲ, ಮನೆಯ ಖರ್ಚು-ವೆಚ್ಚಕ್ಕೆ ಸಾಕಷ್ಟು ತೊಂದರೆಗಳಾಗುತ್ತಿದ್ದವು. ಆದರೆ ಮಸೀದಿಯಿಂದ ಆರ್ಥಿಕ ತ್ಯಾಗದ ಅನುಗ್ರಹದ ಪ್ರವಚನಗಳನ್ನು ಕೇಳಿದಾಗ, ನಾನು ತ್ಯಾಗಗಳಲ್ಲಿ ಭಾಗವಹಿಸಬೇಕು ಎಂದು ಯೋಚಿಸಿದೆ. ಆದ್ದರಿಂದ ನಾವು ತ್ಯಾಗ ಮಾಡಲು ಪ್ರಾರಂಭಿಸಿದ್ದೇವು, ನಾವು ಚಂದ ನೀಡಲು ಪ್ರಾರಂಭಿಸಿದ್ದೇವು, ಈಗ ಸರ್ವಶಕ್ತನಾದ ಅಲ್ಲಾಹನ ತುಂಬಾ ಅನುಗ್ರಹವಿದೆ, ಮನೆಯ ಖರ್ಚು ಕೂಡ ಮುಗಿದಿದೆ. ಆಹಾರ, ಪಾನೀಯಗಳ ಕೊರತೆ ಇಲ್ಲ. ನಾವು ಕಲ್ಪಿಸಿಕೊಳ್ಳದಂತಹ ಸ್ಥಳಗಳಿಂದ ನಮಗೆ ಹಣ ಬರುತ್ತದೆ ಮತ್ತು ನಾವು ಏನು ಕೊಟ್ಟರೂ ಸರ್ವಶಕ್ತನಾದ ಅಲ್ಲಾಹನು ಅದನ್ನು ಹೆಚ್ಚಿಸುತ್ತಲೇ ಇರುತ್ತಿದ್ದಾನೆ. ನವ ಅಹ್ಮದೀಯರೊಂದಿಗೂ ಸಹ ಸರ್ವಶಕ್ತನಾದ ಅಲ್ಲಾಹನು ಅವರ ನಂಬಿಕೆಯನ್ನು ಬಲಪಡಿಸುವ ಸಲುವಾಗಿ ಅಲ್ಲಾಹನು ರೀತಿ ವ್ಯವಹರಿಸುತ್ತಾನೆ.

ಭಾರತದ ವಖ್ಫೇ ಜದೀದ್ ಇನ್ಸ್‌ಪೆಕ್ಟರ್ ಸಾಹಿಬ್ ಹೇಳುತ್ತಾರೆ: ಮೇಲಪಾಳಯಂ ತಮಿಳುನಾಡಿನಲ್ಲಿ 2014ರಲ್ಲಿ ಬೈಅತ್ ಮಾಡಿದ ಒಬ್ಬ ನಿಷ್ಠಾವಂತ ಅಹ್ಮದಿ ಹೇಳುತ್ತಾರೆ: ನಾನು ಬೈಅತ್ ಮಾಡಿದಾಗ ನಾನು ವಖ್ಫೇ ಜದೀದಿಗೆ ನಾಲ್ಕು ಸಾವಿರದ ವಾಗ್ದಾನವನ್ನು ಬರೆಸಿ ಪಾವತಿ ಮಾಡಿದ್ದೆ. ನನಗೆ ಅಷ್ಟೇ

ಸಾಧ್ಯವಿದ್ದಿತ್ತು. ಪ್ರತಿ ವರ್ಷ ಶಕ್ತಿ ಅನುಸಾರ ವರ್ಧಿಸುತ್ತಾ ಹೋದೆನು. ಆದ ಕಾರಣ ಅಲ್ಲಾಹನು ವ್ಯಾಪಾರದಲ್ಲೂ ಬಹಳ ಅಭಿವೃದ್ಧಿ ನೀಡುತ್ತಾ ಹೋದನು. ಸ್ವಲ್ಪ ಕಾಲದ ನಂತರ ಮನೆಯ ಇತರ ಸದಸ್ಯರು ಕೂಡ ಬೈಅತ್ ಮಾಡಿದರು. ಅಲ್ಲಾಹನ ಅನುಗ್ರಹದಿಂದ ಇಂದು ನನ್ನ ವಖ್ಫೇ ಜದೀದಿನ ಚಂದ ಐದು ಲಕ್ಷ ರೂಪಾಯಿಯಾಗಿದೆ. ಲಾಕ್‌ಡೌನ್ ಇದ್ದೂ ಚಂದದ ಅನುಗ್ರಹದಿಂದ ವ್ಯಾಪಾರದಲ್ಲಿ ನನಗೆ ಯಾವುದೇ ನಷ್ಟ ಉಂಟಾಗಿಲ್ಲ. ಬದಲಾಗಿ ವರ್ಧಿಸುತ್ತಾ ಹೋಯಿತು. ಅಲ್ಲಾಹನ ಅನುಗ್ರಹದಿಂದ ಈಗ ನನ್ನ ವ್ಯಾಪಾರ ಇಂಡಿಯದಲ್ಲಿ ಅಲ್ಲದೆ, ತೈಲಾಂಡಿನಲ್ಲೂ ಹರಡಿದೆ. ಇವುಗಳಾಗಿವೆ ಅಲ್ಲಾಹನ ಕೃಪೆ. ಜೂಜಿನ ಹಾಗಿನ ವ್ಯಾಪಾರವಲ್ಲ. ಹಣ ಹಾಕಿಕೊಂಡು ಪರಿಶ್ರಮದಿಂದ ವ್ಯಾಪಾರ ಮಾಡಿದರು ಮತ್ತು ಅಲ್ಲಾಹನ ಮಾರ್ಗದಲ್ಲಿ ಖರ್ಚು ಮಾಡಿದರು. ಆಗ ಅಲ್ಲಾಹನು ಅನೇಕ ಪಟ್ಟಿನ ವರ್ಧನೆ ಕೂಡ ದಯಪಾಲಿಸಿದನು.

ಭಾರತದ ಮತ್ತೊಂದು ಉದಾಹರಣೆಯಿದೆ. ಕೇರಳದ ಮಲಪ್ಪುರಮಿನ ಮುಬಲ್ಲಿಗ್ ಇಂಚಾರ್ಜ್ ಬರೆಯುತ್ತಾರೆ: ನಾಝಿಂ ಮಾಲ್ ಸಾಹಿಬ್ ಮತ್ತು ವಖ್ಫಿನ ಜದೀದಿನ ಇನ್ಸ್‌ಪೆಕ್ಟರ್ ಸಾಹಿಬ್ ವಖ್ಫೇ ಜದೀದಿನ ವರ್ಷದ ಕೊನೆ ಆಗಿರುವ ಕಾರಣದಿಂದ ಜಮಾಅತುಗಳ ಭೇಟಿ ನಡೆಸುತ್ತಿದ್ದರು. ಅಲ್ಲಿ ಒಬ್ಬ ನಿಷ್ಠಾವಂತ ಅಹ್ಮದಿ ವ್ಯಾಪಾರಸ್ಥರಾದ ರಹ್ಮಾನ್ ಸಾಹಿಬ್‌ರ ಫೋನ್ ಕರೆ ಹೀಗೆ ಬಂತು: "ನೀವು ನನ್ನ ಕಂಪನಿಗೆ ಬನ್ನಿರಿ. ನಾನು ನನ್ನ ಕಂಪೆನಿಯಲ್ಲಿ ಒಂದು ಹೊಸ ವಿಭಾಗವನ್ನು ಶುರು ಮಾಡಿದ್ದೇನೆ. ಅಲ್ಲಿ ದುಆ ಮಾಡಿಸಬೇಕು." ನಾವು ಅಲ್ಲಿಗೆ ಹೋದಾಗ ಏನೂ ಕೇಳದೇ 10 ಲಕ್ಷ ರೂಪಾಯಿಯ ಚೆಕ್ಕನ್ನು ಮುಂದಿರಿಸಿದರು. ಅವರು ಹೇಳಿದರು: ಈ ಹಣವನ್ನು ನಾನು ನನ್ನೊಂದು ಸೊತ್ತಿನ ರಿಜಿಸ್ಟ್ರಿ ಮಾಡಿಸಲು ಇರಿಸಿದ್ದೆ. ಆದರೆ ನೀವು ಬಂದ ಕಾರಣದಿಂದ ವಖ್ಫೇ ಜದೀದಿಗೆ ನೀಡಿದ್ದೇನೆ. ರಿಜಿಸ್ಟ್ರಿಯ ದಿನಾಂಕವನ್ನು ಮುಂದೂಡಿದ್ದೇನೆ. ಕೆಲವು ದಿನಗಳ ನಂತರ ಅವರು ಹೇಳುತ್ತಾರೆ: ಒಂದು ಹಿರಿದಾದ ಸಂಖ್ಯೆಯಲ್ಲಿ ಹಣವು ಅವರಿಗೆ ವಿಶೇಷವಾದ ಪ್ರಯತ್ನವೇನೂ ಇಲ್ಲದೇ ಲಭಿಸಿದೆ. ಅದು ಅವರ ಆವಶ್ಯಕತೆಗಿಂತಲೂ ಬಹಳಷ್ಟು ಅಧಿಕವಾಗಿತ್ತು.

ಮಾರಿಷಿಯಸ್‌ನ ಮಹಿಳೆಯೊಬ್ಬರು ಮಿಸ್ ಶಬ್ರೀಜ್ ಸಾಹಿಬಾ. ಅವರು ಹೇಳುತ್ತಾರೆ ನನ್ನ ತಂದೆ–ತಾಯಿಯಿಂದ ಹುಟ್ಟುಹಬ್ಬದ ಉಡುಗೊರೆಯಾಗಿ ನಾನು ಹಣವನ್ನು ಪಡೆದಿದ್ದೇನೆ. ನಾನು ವಖ್ಫೇ ಜದೀದ್ ಹಾಗೂ ತೆಹ್ರೀಕೆ ಜದೀದ್‌ನಲ್ಲಿ ಐನೂರು ಐನೂರು ರೂಪಾಯಿಗಳನ್ನು ಚಂದ ನೀಡಲು ನಿರ್ಧರಿಸಿದೆ. ಆ ಸಮಯದಲ್ಲಿ ಅವರು ಅನಾರೋಗ್ಯದ ಅವಧಿಯನ್ನು ಎದುರಿಸುತ್ತಿದ್ದರು. ಈ ಮಧ್ಯೆ, ನನ್ನ ಚಿಕ್ಕಪ್ಪ ಮತ್ತು ನನ್ನ ಸೋದರಸಂಬಂಧಿಯೊಬ್ಬರು ನನ್ನನ್ನು ಭೇಟಿಯಾಗಲು ಬಂದರು, ಇಬ್ಬರೂ ನನಗೆ ತಲಾ 5,500 ಲಕೋಟೆಗಳನ್ನು ನೀಡಿದರು. ಅಲ್ಲಾಹನು ನನಗೆ ಅದಕ್ಕಿಂತ ಹತ್ತು ಪಟ್ಟು ಹೆಚ್ಚು ಪ್ರತಿಫಲವನ್ನು ನೀಡಿದ್ದಾನೆ ಎಂದು ನನಗೆ ಆಶ್ಚರ್ಯವಾಯಿತು.

ಮತ್ತೆ ಜಾರ್ಜಿಯಾದ ಜಮಾಅತ್ತಿನ ಅಧ್ಯಕ್ಷರು ಹೇಳುತ್ತಾರೆ: ಸದಸ್ಯರಲ್ಲಿ ಒಬ್ಬರು ಮುಹಮ್ಮದ್ ಅಬು ಹಮ್ಮಾದ್ ಸಾಹಿಬ್ ಇದ್ದಾರೆ ಅವರು ಪ್ಯಾಲೆಸ್ತೀನ್‌ಗೆ ಸೇರಿದವರು. ಜಾರ್ಜಿಯಾದಲ್ಲಿ ವೈದ್ಯಕೀಯ ವಿದ್ಯಾರ್ಥಿಯಾಗಿ ಅಧ್ಯಾಯನ ಮಾಡುತ್ತಿದ್ದಾರೆ. ಅವರು ಮೂರು ವರ್ಷಗಳ ಹಿಂದೆ ಬೈಅತ್ ಮಾಡಿದರು. ಈ ರೀತಿ ಅಲ್ಲಾಹನ ಮಾರ್ಗದಲ್ಲಿ ಖರ್ಚು ಮಾಡಬೇಕು ಎಂದು ಅಶ್ರಾ ವಖ್ಫೇ ಜದೀದ್ ಎಂಬ ವಿಚಾರ ಸಂಕಿರಣವನ್ನು ಜಮಾಅತ್ ಆಯೋಜಿಸಿತ್ತು. ಅವರು ಹೇಳುತ್ತಾರೆ ಆ ಸಮಯದಲ್ಲಿ ನನ್ನ ಬಳಿ ಸುಮಾರು ಮುನ್ನೂರು ಡಾಲರ್ ಇತ್ತು. ನನಗೆ **ಖದ್ ಅಫ್‌ಲಹಾ ಮನ್ ಝಕ್ಕಾಹಾ** (ಅಶ್ಶಮ್ಸ್:10) ಅಂದರೆ ಶುದ್ದೀಕರಿಸಿದವನು ಯಶಸ್ವಿಯಾದನು ಎಂಬ ಆಯತ್ ನೆನಪಾದಾಗ ನಾನು ಅದರಲ್ಲಿ ಅರ್ಧದಷ್ಟು ವಖ್ಫೇ ಜದೀದ್‌ಗೆ ಕೊಡುತ್ತೇನೆ ಎಂದು ನಿರ್ಧರಿಸಿದೆ. ಹಾಗಾಗಿ ಚಂದ ಮತ್ತು ಸಾಮಾನ್ಯ ಖರ್ಚುಗಳನ್ನು ಪಾವತಿಸಿದ ನಂತರ, ನನ್ನ ಬ್ಯಾಂಕ್ ಖಾತೆಯಲ್ಲಿ ತಿಂಗಳ ಕೊನೆಯಲ್ಲಿ ಎರಡು ಡಾಲರ್ ಮಾತ್ರ ಉಳಿದಿತ್ತು. ಇವರು ವಿದ್ಯಾರ್ಥಿಯಾಗಿದ್ದಾರೆ. ಡಿಸೆಂಬರ್ ಕೊನೆಗೆ ನನ್ನ ಸಂಬಂಧಿಕರು ಪ್ಯಾಲೆಸ್ತೈನ್ ನಿಂದ ಜಾರ್ಜಿಯಾಕ್ಕೆ ಬರುತ್ತಿದ್ದರು, ನಾನು ಅವರನ್ನು ಹೇಗೆ ಹೊಂದಿಸಿಕೊಳ್ಳುವುದು ಎಂದು ಚಿಂತಿಸುತ್ತಿದ್ದೆ, ಆದರೆ ಅತಿಥಿಗಳು ಬಂದ ದಿನ, ಸರ್ವಶಕ್ತನಾದ ಅಲ್ಲಾಹನು ತನ್ನ ವಿಶೇಷ ಅನುಗ್ರಹದಿಂದ ಬ್ಯಾಂಕಿನಲ್ಲಿ ಒಂದು ಸಾವಿರ ಡಾಲರ್‌ಗಳನ್ನು ವರ್ಗಾಯಿಸಲಾಯಿತು. ಇದಕ್ಕಾಗಿ ನಾನು ಯಾವಾಗಲೂ ಸರ್ವಶಕ್ತನಾದ ಅಲ್ಲಾಹನಿಗೆ ಧನ್ಯವಾದ ಹೇಳುತ್ತೇನೆ ಮತ್ತು ಇದನ್ನು ಚಂದದ ಅನುಗ್ರಹ ಎಂದು ಪರಿಗಣಿಸುತ್ತೇನೆ.

ಇದು ಯೋಚಿಸುವ ವಿಷಯವಾಗಿದೆ, ಲೌಕಿಕ ವ್ಯಕ್ತಿಯು ಬೇರೆಯದನ್ನು ಯೋಚಿಸುತ್ತಾನೆ, ಆದರೆ ಧರ್ಮನಿಷ್ಠನು ಮಾತ್ರ ಅಲ್ಲಾಹನ ಮಾರ್ಗದಲ್ಲಿ ಖರ್ಚು ಮಾಡುವುದರಿಂದ ಅವನ ಅನುಗ್ರಹಗಳು ಸಂಭವಿಸುತ್ತವೆ ಎಂದು ಭಾವಿಸುತ್ತಾನೆ.

ಕೀನ್ಯಾದ ಮುಅಲ್ಲಿಮ್ ಸಾಹೇಬರು ಬರೆಯುತ್ತಾರೆ. ಅವರ ಜಮಾಅತ್ತಿನಲ್ಲಿ ಓರ್ವ ನವ ಅಹ್ಮದಿ ಮಹಿಳೆ ಖದೀಜಾ ಸಾಹಿಬಾ ನರ್ಸರಿ ಶಾಲೆಯ ಶಿಕ್ಷಕಿಯಾಗಿದ್ದರು. ವಖ್ಫೇ ಜದೀದ್ನ ವರ್ಷದ ಆರಂಭದಲ್ಲಿ, ಅವರು ಐದು ನೂರು ಶಿಲ್ಲಿಂಗ್ಗಳನ್ನು ಬರೆಸಿದರು. ಅದರ ಪಾವತಿಯೂ ಮಾಡಿದ್ದರು. ರಸೀದಿ ಕೊಡಲು ಶಾಲೆಗೆ ನಾನು ಹೋಗಿದ್ದೆ ಮರುದಿನ ಅವರು ನನ್ನ ಮನೆಗೆ ಬಂದು ಈ ಚಂದದಲ್ಲಿ ಇನ್ನೂ ಐನೂರು ನೀಡುವುದಾಗಿ ಪತ್ನಿಗೆ ತಿಳಿಸಿದರು. ಹೀಗೆ ಒಟ್ಟು ಪಾವತಿಯು ಒಂದು ಸಾವಿರ ಶಿಲ್ಲಿಂಗ್ ಆಗಬೇಕು ಎಂದು ಅವರು ಹೇಳಿದರು. ಅವರು ಹೇಳುತ್ತಾರೆ ಅಲ್ಲಾಹನು ತನಗೆ ಇನ್ನಷ್ಟು ಅನುಗ್ರಹಿಸಲಿ ಎಂಬ ಆಲೋಚನೆಯಿಂದ ಈ ರೀತಿ ಮಾಡುತ್ತಿದ್ದೇನೆ. ನಾನು ಮನೆಗೆ ಬಂದಾಗ, ನನ್ನ ಪತ್ನಿಯು ನನಗೆ ಇದರ ಬಗ್ಗೆ ತಿಳಿಸಿದರು. ಮತ್ತು ನಂತರ ನಾನು ರಸೀದಿಯನ್ನು ಕೊಡಲು ಹೋದಾಗ ಅವರು ಹೇಳಿದರು ನನ್ನ ಓರ್ವ ಪುತ್ರ ಕಾಲೇಜಿನಲ್ಲಿ ಓದುತ್ತಿರುವ ಮಗನಿದ್ದಾನೆ ಆತನ ಖರ್ಚಿಗೆ ಅರ್ಜಿ ಸಲ್ಲಿಸಿದ್ದು ಮಂಜೂರಾಗುತ್ತಿರಲಿಲ್ಲ ಆದರೆ ಇಂದು ನನಗೆ ಕಾಲೇಜಿನಿಂದ ಆತನ ಖರ್ಚು ಸುಮಾರು ಮೂವತ್ತು ಸಾವಿರ ಶಿಲ್ಲಂಗ್ ಆಗಿತ್ತು ಅದು ಸರಕಾರದಿಂದ ಶಾಲಾ ಖಾತೆಗೆ ಜಮಾ ಮಾಡಲಾಗಿದೆ. ಈ ಬಗ್ಗೆ ನನಗೆ ಸಾಕಷ್ಟು ನೆಮ್ಮದಿ ಸಿಕ್ಕಿದೆ ಎನ್ನುತ್ತಾರೆ ಅವರು.

ಇಂಡೋನೇಶಿಯದ ಅಮೀರ್ ಸಾಹಿಬ್ ಬರೆಯುತ್ತಾರೆ: ಒಂದು ಸಣ್ಣ ಜಮಾಅತಿನವರಾದ ಅಬ್ದುರ್ರಹೀಂ ಸಾಹಿಬ್ ಹೇಳುತ್ತಾರೆ: ನಾನು ಪ್ರತಿ ವರ್ಷ ವಖ್ಫೇ ಜದೀದಿನ ಚಂದವನ್ನು ಪಾವತಿ ಮಾಡುತ್ತೇನೆ. 2019 ಮತ್ತು 2020 ನನಗೆ ಕಷ್ಟಕರವಾದ ವರ್ಷಗಳಾಗಿದ್ದುವು. ಹೊಸ ವ್ಯಾಪಾರವನ್ನು ಮಾಡುತ್ತಿದ್ದ ಕಾರಣದಿಂದ ಉದ್ಯೋಗವನ್ನು ಬಿಟ್ಟಿದ್ದೆ, ವ್ಯಾಪಾರ ಕೂಡ ನಡೆಯಲಿಲ್ಲ, ಕೈಯಲ್ಲಿದ್ದ ಹಣವೂ ಖಾಲಿಯಾಯಿತು. ವಖ್ಫೇ ಜದೀದಿನ ವಾಗ್ದಾನವನ್ನು ಪಾವತಿ ಮಾಡುವ ಯಾವುದೇ ಮಾರ್ಗ ತೋಚುತ್ತಿರಲಿಲ್ಲ. ಪ್ರತಿದಿನ ತಹಜ್ಜುದಿನಲ್ಲಿ ದುಆ ಮಾಡುತ್ತಿದ್ದೆ ಮತ್ತು ಖಲೀಫತುಲ್ ಮಸೀಹಿಗೆ ಪತ್ರ ಬರೆಯುತ್ತಿದ್ದೆ. ಹೇಗಿದ್ದರೂ ಯಾವುದಾದರೂ ರೀತಿಯಲ್ಲಿ ನಾನು ವಾಗ್ದಾನ ಮಾಡಿದ್ದ ಹಣವನ್ನು ಪಾವತಿ ಮಾಡಿದೆ. ಕೆಲವು ದಿನಗಳ ನಂತರ ನಾನು ಏಳು ವರ್ಷಗಳ ಹಿಂದೆ ರಾಜಿನಾಮೆ ನೀಡಿದ್ದ ಜಾಗದಿಂದ ನೌಕರಿಗಾಗಿ ಕರೆಯಲಾಯಿತು. 51ನೇ ವಯಸ್ಸಿನಲ್ಲಿ ಒಂದು ಸ್ಥಿರ ಆಮದಿನ ಮಾರ್ಗ ಉಂಟಾಗಿದ್ದು ಕೇವಲ ಅಲ್ಲಾಹನ ಅನುಗ್ರಹವಾಗಿದೆ.

ಸೆನೆಗಲ್‌ನಲ್ಲಿ ತಂಬಕೌಂಡ ಎಂಬ ಸ್ಥಳವಿದೆ, ಅಲ್ಲಿನ ಮುಬಲ್ಲಿಗ್ ಸಾಹೇಬರು ನನ್ನ ಭೇಟಿಯ (ದೌರದ) ಸಮಯದಲ್ಲಿ ಚಂದ ನೀಡುವುದಾಗಿ ತಿಳಿಸಲಾಯಿತು ಮತ್ತು ನಾನು ಹಿಂದಿನ ಖುತ್‌ಬದಲ್ಲಿ ವಿವರಿಸಿದ ಘಟನೆಗಳನ್ನು ಅಲ್ಲಿಯೂ ವಿವರಿಸಲಾಯಿತು. ಓರ್ವ ಅಹ್ಮದಿ ಉಸ್ಮಾನ್ ಅಹ್ಮದ್ ಸಾಹಿಬ್ ಹೇಳಿದರು ಅವರು ಬೈಅತ್ ಮಾಡಿದಾಗ ಅವರ ಆರ್ಥಿಕ ಸ್ಥಿತಿ ತುಂಬಾ ದುರ್ಬಲವಾಗಿತ್ತು ಮತ್ತು ಬೈಅತ್‌ನ ನಂತರ ಅವರ ಎಲ್ಲಾ ಸಂಬಂಧಿಕರು ಶತ್ರುಗಳಾದರು. ನಾಲ್ಕು ಬಾರಿ ವಿರೋಧಿಗಳು ಅವರ ಮನೆಗೆ ಬೆಂಕಿ ಹಚ್ಚಲು ಪ್ರಯತ್ನಿಸಿದರು. ಪ್ರತಿ ಬಾರಿ ಮನೆಯ ಒಂದು ಭಾಗ ಸುಟ್ಟುಹೋಗುತ್ತದೆ, ಆದರೆ ಅವರು ಜಮಾಅಯ್‌ನ ಚಂದದಲ್ಲಿ ಭಾಗವಹಿಸಲು ಪ್ರಾರಂಭಿಸಿದಾಗಿನಿಂದ ಅವರ ದಿನಗಳು ಮತ್ತೆ ಮರಳಿವೆ. ಚಂದಗಳ ಅನುಗ್ರಹದಿಂದ ಈಗ ತಮ್ಮ ದೃಢವಾದ ಮನೆ ಕಟ್ಟಿಕೊಂಡಿದ್ದಾರೆ ಎಂದು ಹೇಳುತ್ತಾರೆ. ಮೊದಲು ಅವರ ಮನೆ ಹುಲ್ಲಿನಿಂದ ಕಟ್ಟಿಕೊಂಡಿದ್ದರು ಅದು ಸುಟ್ಟು ಹೋಗುತ್ತಿತ್ತು ಆದರೆ ಈಗ ಅವರು ದೃಢವಾದ ಮನೇ ಕಟ್ಟಿಕೊಂಡಿದ್ದಾರೆ. ಮಕ್ಕಳು ಸಹ ನಗರದಲ್ಲಿ ಉತ್ತಮ ಶಿಕ್ಷಣ ಪಡೆಯುತ್ತಿದ್ದಾರೆ, ಪ್ರತಿ ವರ್ಷವೂ ಇತರ ಚಂದಗಳಂತೆ ವಖ್ಫೇ ಜದೀದ್‌ನಲ್ಲಿ ಗಣನೀಯವಾಗಿ ಹೆಚ್ಚಳ ಮಾಡಿ ಪಾವತಿಸುತ್ತಾರೆ ಮತ್ತು ಅವರು ಹೇಳುತ್ತಾರೆ ನನ್ನ ವಿರೋಧಿಗಳಾಗಿದ್ದವರು ಅವರೆಲ್ಲರು ಸತ್ತು ಹೋಗಿದ್ದಾರೆ ಮತ್ತು ಜೀವಂತವಾಗಿದ್ದವರು ತೀರಾ ಹತಾಶ ಸ್ಥಿತಿಯಲ್ಲಿದ್ದಾರೆ.

ತಾನ್‌ಝಾನಿಯಾದ ಅಮೀರ್ ಸಾಹಿಬ್ ಒಬ್ಬ ರೈತನ ಘಟನೆಯನ್ನು ಬರೆಯುತ್ತಾನೆ. ಅವರು ಟೊಮೆಟೊ ಹೊಲಗಳನ್ನು ಹೊಂದಿದ್ದಾರೆ ಮತ್ತು ವಿಕ್ಟೋರಿಯಾ ಸರೋವರದಿಂದ ನೀರನ್ನು ಎತ್ತುವ ಮೂಲಕ ನೀರಾವರಿ ಕೈಗೊಳ್ಳಲಾಗುತ್ತದೆ ಮತ್ತು ಇದಕ್ಕಾಗಿ ಅವರು ಯಂತ್ರಗಳು ಮತ್ತು ಪಂಪ್‌ಗಳನ್ನು ಬಾಡಿಗೆಗೆ ತೆಗೆದುಕೊಳ್ಳಬೇಕಾಗುತ್ತದೆ. ಈ ವರ್ಷ ಮಳೆ ಕಡಿಮೆಯಾಗಿದೆ ಎನ್ನಲಾಗುತ್ತಿದೆ. ಹೊಲಗಳ ಸ್ಥಿತಿ ತೀರಾ ಹದಗೆಟ್ಟಿತು. ಹೊಲಕ್ಕೆ ನೀರುಣಿಸುತ್ತಿದ್ದ ಸಮೀಪದ ರೈತರು ನಿಮ್ಮ ಬೆಳೆಗೆ ಹೀಗಾಗುತ್ತಿದೆ ಎಂದು ನಗುತ್ತಿದ್ದರು. ಆದಾಗ್ಯೂ ಅವರು ಹೇಳೂತ್ತಾರೆ, ಮುಅಲ್ಲಿಮ್ ಸಾಹೆಬರು ನನ್ನ ಗಮನವನ್ನು ಚಂದದತ್ತ ಸೆಳೆದರು, ಆದ್ದರಿಂದ ನನ್ನ ಬಳಿ ಒಂದು ಸಾವಿರ ಶಿಲ್ಲಿಂಗ್ ಇತ್ತು ಮತ್ತು ನಾನು ಅದನ್ನು ಚಂದದಲ್ಲಿ ನೀಡಿದೆ. ಆಗ ಮುಅಲ್ಲಿಮ್ ಸಾಹೇಬರು ರಸೀದಿಯನ್ನು ನೀಡಿದರು. ಮರುದಿನ ಅಮೀಲ ಸಭೆಗೆ ಇವರು ಬಂದರು ಮತ್ತು ಈ ಋತುವಿನ ಮೊದಲ ಮಳೆ ನನ್ನ ಹೊಲದಲ್ಲಿ ಬಿದ್ದಿರುವುದರಿಂದ ನಾನು ಮಾಡಿದ ವ್ಯವಹಾರಕ್ಕೆ ಪ್ರತಿಫಲ ಸಿಕ್ಕಿದೆ. ನೀರು ತುಂಬಿದೆ. ಹೀಗೆ ಅಲ್ಲಾಹನು ನನ್ನನ್ನು ಅನುಗ್ರಹಿಸಿದನು.

ಸೆರಾ ಲಿಯೋನ್‌ನ ಮುಬಲ್ಲಿಗ್ ಸಾಹೇಬರು ಬರೆಯುತ್ತಾರೆ, ಅಲೆಕ್ಸತಮು ಎಂಬವರು ಓರ್ವ ಶಿಕ್ಷಕ ಮತ್ತು ಸಂಶೋಧಕರು ಇದ್ದಾರೆ. ಅವರು ಹೇಳುತ್ತಾರೆ; ಕಳೆದ ವರ್ಷ ಸರ್ಕಾರದ ಕೆಲವು ಸಮಸ್ಯೆಗಳಿಂದ ಸಂಸ್ಥೆಯು ವೇತನ ಪಾವತಿಯನ್ನು ವಿಳಂಬಗೊಳಿಸಿದ್ದರಿಂದ ಮತ್ತು ಸ್ವಲ್ಪ ಸಮಯದವರೆಗೆ ಜೀವನವು ತುಂಬಾ ಕಷ್ಟಕರವಾದ ಕಾರಣ ಅವರ ವಸಿಯ್ಯತ್‌ನ ಚಂದ ಮತ್ತು ಇತರ ಚಂದಗಳಲ್ಲಿ ಸ್ವಲ್ಪ ಬಾಕಿ ಇತ್ತು. ಆದರೆ, ಅವರು ಎಲ್ಲಿಂದಲೋ ಹಣ ಪಡೆದು ತಕ್ಷಣ ವ್ಯವಸ್ಥೆ ಮಾಡಿ ಈ ಸಂಕಷ್ಟದ ಸಂದರ್ಭದಲ್ಲೂ ವಸಿಯ್ಯತ್ ಹಾಗೂ ಮತ್ತಿತರ ಚಂದಗಳನ್ನು ಪಾವತಿಸಿದರು. ಅವರು ಹೇಳತ್ತಾರೆ ಚಂದಗಳನ್ನು ಪಾವತಿಸಿದ ನಂತರ ಮೊದಲು ಅಕ್ಕಿಯ ಸಂಶೋಧನಾ ಯೋಜನೆಗಾಗಿ ಗಿನಿಕನಾಕರಿಯ ಗುಂಪಿನಲ್ಲಿ ನೇಮಿಸಲಾಯಿತು. ತದನಂತರ ಒಂದು ದೊಡ್ಡ ಫರ್ನಿಶ್ಡ್ (ಸುಸಜ್ಜಿತ) ಮನೆಯೂ ಸಿಕ್ಕಿತು. ನಂತರ ಯುಕೆ ಜಲ್ಸಾ ಸಾಲಾನ 2022ರ ಮೊದಲು, ಮನೆಯಲ್ಲಿ ಟಿವಿ ಮತ್ತು ಎಂಟಿಎ ಸ್ಥಾಪಿಸಲು ನನಗೆ ಅವಕಾಶ ಲಭಿಸಿತು. ಆಗ ಎಲ್ಲಕ್ಕಿಂತ ಮಿಗಿಲಾಗಿ

ಅಲ್ಲಾಹನ ಅನುಗ್ರಹವೇನೆಂದರೆ ಜಪಾನ್‌ನ ಕಾಗೋಶಿಮಾ ವಿಶ್ವವಿದ್ಯಾಲಯದಲ್ಲಿ ಪಿಎಚ್‌ಡಿ ಮಾಡಲು ಸ್ಕಾಲರ್‌ಶಿಪ್ ಬಂದಾಗ ನಾನೂ ಅರ್ಜಿ ಸಲ್ಲಿಸಿದ್ದೆ. ಅದಕ್ಕೆ ಸಂಸ್ಥೆಯಿಂದ ಮೊದಲು ನನಗೆ ಆದ್ಯತೆ ನೀಡಿ ಅಲ್ಲಿಯೇ ಆಯ್ಕೆ ಮಾಡಲಾಯಿತು. ನಾನು ಕಳೆದ ವರ್ಷದಿಂದ ಜಪಾನ್‌ನಲ್ಲಿ ಇದ್ದೇನೆ. ಅಲ್ಲಾಹನ ಅನುಗ್ರಹದಿಂದ ಜಪಾನ್ ನಲ್ಲೂ ಜಮಾಅತ್‌ನೊಂದಿಗೆ ಸಂಪರ್ಕದಲ್ಲಿದ್ದೇನೆ, ಆ ಸಂಸ್ಥೆಯು ನನ್ನ ಕುಟುಂಬಕ್ಕೆ ಮನೆ ನೀಡಿದ್ದಲ್ಲದೆ, ಅಲ್ಲಿನ ಸರಾಲಿಯೋನ್ ನಲ್ಲಿರುವ ಕುಟುಂಬಕ್ಕೆ ಸಂಬಳದ ಒಂದು ಭಾಗವನ್ನು ಮುಂದುವರಿಸಿದ್ದು ಅಲ್ಲಾಹನ ಅನುಗ್ರಹವಾಗಿದೆ. ಏನೇ ಇರಲಿ, ಸರ್ವಶಕ್ತನಾದ ಅಲ್ಲಾಹನು ಚಂದದ ಅನುಗ್ರಹದಿಂದ ನನಗೆ ಈ ಅನುಗ್ರಹವನ್ನು ದಯಪಾಲಿಸಿದನು ಎಂಬ ನಂಬಿಕೆವರ್ಧಕಕ್ಕೆ ಕಾರಣವಾಗಿದೆ ಎಂದು ಅವರು ಹೇಳುತ್ತಾರೆ.

ಅಹ್ಮದೀಯರಲ್ಲಿ, ಮತ್ತು ನವ ಅಹ್ಮದಿಯರಲ್ಲೂ ಸರ್ವಶಕ್ತನಾದ ಅಲ್ಲಾಹನಿಗಾಗಿ ಸಂಪತ್ತಿನ ಪ್ರೀತಿಯಲ್ಲಿ ನಿರಾಸಕ್ತಿಯ ಉದಾಹರಣೆಗಳನ್ನು ನಾವು ನೋಡುತ್ತೇವೆ. ಆದ್ದರಿಂದ, ಸೆರಾಲಿಯೋನ್‌ನ ಮೊಯಾಂಬಾ ಪ್ರದೇಶದ ಮುಬಲ್ಲಿಗ್ ಸಾಹೇಬರು ಬರೆಯುತ್ತಾರೆ; ಖುತ್‌ಬ ಜುಮುಅದಲ್ಲಿ ವಖ್ಫೇ ಜದೀದ್‌ನತ್ತ ಗಮನ ಸೆಳೆಯಲಾಯಿತು, ಒಮ್ಮೆ ಓರ್ವ ಸಹಾಬಿಯೂ ಕೊಡಲಿಯೊಂದಿಗೆ ಕಾಡಿಗೆ ಹೋಗಿ ಮರವನ್ನು ಕತ್ತರಿಸಿ ಅದನ್ನು ಮಾರಾಟ ಮಾಡಿದ ನಂತರ ಅದರ ಆದಾಯವು ರಸೂಲುಲ್ಲಾಹ್(ಸ) ಅವರಿಗೆ ನಿಡಿದರು. ಅವರು ಹೇಳುತ್ತಾರೆ ಹತ್ತಿರದಲ್ಲಿ ಡೋಡೋ ಎಂಬ ಗ್ರಾಮವಿದೆ ಅಲ್ಲಿಂದ ಶುಕ್ರವಾರದ ಪ್ರಾರ್ಥನೆಗೆ ಅಹ್ಮದಿಯರು ಬರುತ್ತಾರೆ. ಅವರಲ್ಲಿ ಓರ್ವ ಪ್ರಾಮಾಣಿಕ ಅಹ್ಮದಿ ಮಾನ್ಯ ಖಾಸಿಮ್ ಸಾಹಿಬ್, ಒಂದು ದಿನ ಬಿಸಿಯಾದ ಮಧ್ಯಾಹ್ನ ಬಂದು, ನಾನು ವಖ್ಫೇ ಜದೀದ್‌ನಲ್ಲಿ ನೀಡುತ್ತಿರುವ ನನ್ನ ಗಳಿಕೆಯಾಗಿದೆ ಎಂದು ಹೇಳಿ ದೊಡ್ಡ ಮೊತ್ತವನ್ನು ನೀಡಿದರು. ಮಾಸಿಕ ಖರ್ಚಿಗೆ ಒಂದಿಷ್ಟು ಹಣ ಇಟ್ಟುಕೊಳ್ಳಲು ಹೇಳಿದರು. ಅದಕ್ಕೆ ಅವರು ಬಹಳ ಉತ್ಸಾಹಿತವಾದ ಧ್ವನಿಯಲ್ಲಿ ಹೀಗೆ ಹೇಳ ತೊಡಗಿದರು ನೀವು ಸಹಾಬಿಯ ಕಥೆಯನ್ನು ಹೇಳಿದ ದಿನ ನಾನು ಈ ಕಥೆಯನ್ನು ಅನುಸರಿಸಲು ಮನಸ್ಸು ಮಾಡಿದ್ದೆ. ಮತ್ತು ಸಂಪೂರ್ಣ ಹಣವನ್ನು ನೀವು ಇಟ್ಟುಕೊಳ್ಳಿ. ಸರ್ವಶಕ್ತನಾದ ಅಲ್ಲಾಹನು ಸ್ವತಃ ನನಗೆ ಅನುಗ್ರಹಿಸುವನು.

ಅದೇ ರೀತಿ ತಾಂಜಾನಿಯಾದ ಅಮೀರ್ ಸಾಹಿಬ್ ಬರೆಯುತ್ತಾರೆ: ಶಿಯಾಂಗಾ ಪ್ರದೇಶದ ಮುಅಲ್ಲಿಮ್ ಸಾಹೇಬರು ಹೇಳಿದರು ಅಲ್ಲಿ ಸಿಂಬಚ್ಚೈ ಎಂಬ ಗ್ರಾಮವಿದೆ. ಇದು ಹೊಸ ಸ್ಥಳ. ಜಮಾಅತ್ತಿನ ಹೊಸ ಗಿಡವನ್ನು ಅಲ್ಲಿ ನೆಡಲಾಗಿದೆ. ಹೊಸ ಜಮಾಅತ್ ಸ್ಥಾಪಿಸಲಾಗಿದೆ. ಡಿಸೆಂಬರ್ ವರೆಗೆ, ನಲವತ್ತೊಂಬತ್ತು ಜನರು ಬೈಅತ್ ಮಾಡಿದ್ದಾರೆ ಮತ್ತು ಜಮಾಅತ್‌ಗೆ ಸೇರಿದ್ದಾರೆ. ಈ ಜಮಾಅತ್ ಅನ್ನು ಕಳೆದ ತಿಂಗಳು ಸ್ಥಾಪಿಸಲಾಯಿತು. ಡಿಸೆಂಬರ್‌ನಲ್ಲಿ ಅವರು ತಮ್ಮ ಕ್ಷೇತ್ರದ ಜಮಾಅತ್‌ಗಳಿಗೆ ಭೇಟಿ ನೀಡುತ್ತಿದ್ದರು ಎಂದು ಮುಅಲ್ಲಿಮ್ ಸಾಹೇಬರು ಹೇಳುತ್ತಾರೆ. ಅವರು ಈ ಹೊಸ ಜಮಾಅತ್ತಿನ ಮೂಲಕವೂ ಹಾದುಹೋದರು. ಇಲ್ಲಿ ಬೈಅತ್ ಮಾಡಿದ ಹೆಚ್ಚಿನ ಜನರು ಮೊದಲು ಅಧರ್ಮೀಯರಾಗಿದ್ದರು. ಅವರಿಗೆ ಧರ್ಮದೊಂದಿಗೆ ಯಾವುದೇ ಸಂಬಂಧವಿರಲಿಲ್ಲ, ಅದಕ್ಕಾಗಿಯೇ ಅವರ ತರಬೇತಿಗಾಗಿ ಪ್ರಾರ್ಥನೆ ಮತ್ತು ಖುರ್‌ಆನ್‌ಗೆ ಗಮನ ನೀಡಲಾಗುತ್ತಿದೆ. ಮಧ್ಯಾಹ್ನ ಪ್ರಾರ್ಥನೆಯ ನಂತರ ತರಬೇತಿ ತರಗತಿ ನಡೆಯಿತು. ಅದರಲ್ಲಿ, ಮುಅಲ್ಲಿಮ್ ಸಆಹೇಬರು ಪ್ರಾರ್ಥನೆಯ ವಿಧಾನ ಮತ್ತು ಇತರ ನ್ಯಾಯಶಾಸ್ತ್ರದ ವಿಷಯಗಳನ್ನು ವಿವರಿಸಿದರು. ವಯಸ್ಸಾದ ಅಹ್ಮದಿ ಶಿಕ್ಷಕರ ಬ್ಯಾಗ್‌ನಲ್ಲಿದ್ದ ರಸೀದಿ ಪುಸ್ತಕವನ್ನು ನೋಡಿ ಅದರ ಬಗ್ಗೆ ಕೇಳಿದರು. ಇದು ವಖ್ಫೇ ಜದೀದ್‌ನ ಕೊನೆಯ ತಿಂಗಳಾಗಿದ್ದು ಮತ್ತು ನಾವು ನಮ್ಮ ವಾಗ್ದಾನಗಳನ್ನು ಸಂಗ್ರಹಿಸಿ ಕೇಂದ್ರಕ್ಕೆ ವರದಿ ನೀಡಬೇಕು ಹೀಗೆ ಮಾಡುವುದ್ದರಿಂದ ಖಲೀಫತುಲ್ ಮಸೀಹರ ಬಳಿ ನಮ್ಮ ವರದಿ ತಲುಪುತ್ತದೆ. ಈ ಚಂದದಲ್ಲಿ ಸೇರುವ ಒಬ್ಬ ಅಹ್ಮದಿಗೆ ಈ ಚಂದದ ರಸೀದಿಯನ್ನು ನೀಡಲಾಗುತ್ತದೆ. ಇದನು ಆಲಿಸಿದ ಮತ್ತೊಬ್ಬ ಅಹ್ಮದಿ ಹೇಳಿದರು; ನಮ್ಮಿಂದ ಚಂದವನ್ನು ಯಾವಾಗ ತೆಗೆದುಕೊಳ್ಳುವಿರಾ? ಮುಅಲ್ಲಿಮ್ ಸಾಹೇಬರು ಹೇಳಿದರು: ನಿಮ್ಮ ಪರಿಸ್ಥಿತಿ ಬಿಗಿಯಾಗಿದೆ ಮತ್ತು ನೀವು ಈಗಷ್ಟೇ ಅಹ್ಮದಿ ಆಗಿದ್ದೀರಿ, ತರಬೇತಿಯ ಅವಶ್ಯಕತೆ ಇದೆ ಮುಂದಿನ ವರ್ಷದಿಂದ ನಿಮ್ಮನ್ನು ಚಂದಗಳಲ್ಲಿ ಸೇರಿಸಲಾಗುತ್ತದೆ ಎಂದು ನಾನು ಭಾವಿಸಿದ್ದೇನೆ, ಅದಕ್ಕೆ ಎಲ್ಲಾ ನವ ಅಹ್ಮದಿಯರು ಈ ವರ್ಷ ನಮ್ಮ ಹೆಸರುಗಳು ಖಲೀಫತುಲ್ ಮಸೀಹ್ ಬಳಿ ಹೋಗುವುದಿಲ್ಲವೇ? ಎಂದು ಹೇಳಿದರು. ಅದು ಸಾಧ್ಯವಿಲ್ಲ. ಆಗ ಅಲ್ಲಿದ್ದವರೆಲ್ಲ ತಮ್ಮ ಬಳಿ ಇದ್ದದ್ದನ್ನೆಲ್ಲ ಚಂದದಲ್ಲಿ ನೀಡಿದರು. ಅಲ್ಲಿಂದ ನಾನು ಹೊರಡಲು ಸಿದ್ಧವಾದಾಗ ಅವರೆಲ್ಲರು ಹೇಳಿದರು ಮುಅಲ್ಲಿಮ್ ಸಾಹೇಬರೇ: ನಮ್ಮ ಮುಂದಿನ ವರ್ಷದ ವಾಗ್ದಾನಗಳನ್ನು ಈಗಲೇ ತೆಗೆದುಕೊಳ್ಳಿ, ಅದಕ್ಕೆ ಅವರು ಹೊಸ ವರ್ಷದ ಚಂದಗಳ ವಾಗ್ದಾನಗಳನ್ನು ಸಹ ಬರೆಸಿದರು. ಹೀಗೆ ನವ ಅಹ್ಮದಿಯರಲ್ಲೂ ಸಹ ಸರ್ವಶಕ್ತನಾದ ಅಲ್ಲಾಹನು ಈ ರೀತಿಯಾಗಿ ನಂಬಿಕೆಯನ್ನು ಹುಟ್ಟುಹಾಕುತ್ತಿದ್ದಾನೆ. ಹೀಗೆ ಅವರಲ್ಲಿ ನಂಬಿಕೆ ತುಂಬುತ್ತಿದ್ದಾನೆ.

ಗ್ಯಾಂಬಿಯಾದ ಅಮೀರ್ ಸಾಹಿಬ್ ಬರೆಯುತ್ತಾರೆ. ಉತ್ತರ ದಂಡೆಯಲ್ಲಿರುವ ಒಂದು ಜಮಾಅತ್ ಆದ ಡುತಾಬುಲುವಿನಲ್ಲಿ ಅಹ್ಮದಿ ಸ್ನೇಹಿತ ಜಾಲೊ ಸಾಹಿಬ್ ಇದ್ದಾರೆ. ಅವರ ತಂದೆ ಅಹ್ಮದಿ ಅಲ್ಲ. ಅವರು ಗ್ರಾಮದ ಮುಖ್ಯಸ್ಥರಾಗಿದ್ದಾರೆ. ತುಂಬಾ ವಯಸ್ಸಾದವರು ಮತ್ತು ರೋಗಿಯಾಗಿದ್ದಾರೆ. ಆದುದರಿಂದ, ಅಹ್ಮದೀಯರಾದ ಅವರ ಪುತ್ರರು ಅವರ ಬದಲಾಗಿ ಹಳ್ಳಿಯ ವ್ಯವಹಾರಗಳನ್ನು ನೋಡಿಕೊಳ್ಳುತ್ತಾರೆ. ಒಂದು ದಿನ ಇಸ್ಲಾಮಿಕ್ ಎನ್‌ಜಿಒ ಅವರ ಗ್ರಾಮಕ್ಕೆ ಬಂದಿತು ಎಂದು ಅವರು ಹೇಳಿದರು. ಅವರ ಪ್ರಕಾರ ಅವರು ಮುಸ್ಲಿಮರಿಗೆ ಕೇವಲ 15 ಸಾವಿರ ದಲಾಸಿಯಲ್ಲಿ ಸಹಾಯ ಮಾಡುತ್ತಿದ್ದರು. ನೀನು ಬಹಳ ಸಭ್ಯ ಮತ್ತು ಒಳ್ಳೆಯ ವ್ಯಕ್ತಿ ಎಂದು ನಿಮ್ಮ ಬಗ್ಗೆ ಕೇಳಿದ್ದೇವೆ ಎಂದು ಅವರು ನನಗೆ ಕರೆ ಮಾಡಿ ಹೇಳಿದರು. ನಾವು ನಿಮಗೆ ಮತ್ತು ನಿಮ್ಮ ತಂದೆಗೆ ಮೂವತ್ತು ಸಾವಿರ ದಲಾಸಿಗಳನ್ನು ಸಹಾಯವಾಗಿ ನೀಡಲು ಬಯಸುತ್ತೇವೆ ಆದರೆ ಒಂದೇ ಸಮಸ್ಯೆ ಎಂದರೆ ನೀವು ಅಹ್ಮದಿ ಆಗಿದ್ದೀರಿ. ಜಮಾಅತ್ತನ್ನು ತ್ಯಜಿಸಿದರೆ ಈ ಮೊತ್ತ ಸಿಗುತ್ತದೆ. ಈ ಬಗ್ಗೆ ಜಾಲೋ ಸಾಹಿಬ್ ಎನ್‌ಜಿಒಗೆ ಉತ್ತರಿಸಿದರು: ನನಗೆ ಹಣದ ಅವಶ್ಯಕತೆ ಇಲ್ಲ ಏಕೆಂದರೆ ಜಮಾಅತ್ ತನ್ನ ಸೇವಕರಿಗೆ ಅಲ್ಲಾಹನು ಸಾಕು ಎಂದು ನಮಗೆ ಕಲಿಸಿದೆ ಮತ್ತು ನಾನು ಪ್ರತಿ ವರ್ಷ ಜಮಾಅತ್‌ಗೆ ಹದಿನೈದು ಸಾವಿರಕ್ಕೂ ಹೆಚ್ಚು ದಲಾಸಿಗಳನ್ನು ನೀಡುತ್ತೇನೆ. ಅವರು ಇದನ್ನು ಕೇಳಿ ಬಹಳ ಆಶ್ಚರ್ಯಪಟ್ಟರು ಮತ್ತು ನೀವೇ ಬಡವರಾಗಿರುವಾಗ ಜಮಾಅತ್‌ಗೆ ಏಕೆ ಇಷ್ಟು ಹಣವನ್ನು ನೀಡುತ್ತೀರಿ ಎಂದು ಹೇಳಿದರು. ಇದರ ಬಗ್ಗೆ ಅಹ್ಮದಿಯರು ಹೇಳಿದರು, ಸರ್ವಶಕ್ತನಾದ ಅಲ್ಲಾಹನ ಅನುಗ್ರಹಗಳನ್ನು ನಾವು ಪಡೆಯುತ್ತಿರುವ ಬಗ್ಗೆ ನೀವು ತಿಳಿದುಕೊಂಡರೆ ನೀವು ಸಹ ಇಮಾಮ್ ಮಹದಿ ಅಲೈಹಿಸ್ಸಲಾಮ್ ಅವರ ಉಮ್ಮತ್ತಿನ ಭಾಗವಾಗುತ್ತಿರ.

ಆದ್ದರಿಂದ ದೂರದಲ್ಲಿ ವಾಸಿಸುವ ಜನರ ಹೃದಯದಲ್ಲಿ ಸರ್ವಶಕ್ತನಾದ ಅಲ್ಲಾಹನು ಸೃಷ್ಟಿಸುತ್ತಿರುವ ನಂಬಿಕೆಯ ಸ್ಥಿತಿ ಇದಾಗಿದೆ, ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವಸಲ್ಲಮರ ನೈಜ ಗುಲಾಮನನ್ನು ನಂಬಿದ ನಂತರ, ಅವರು ತಮ್ಮ ನಂಬಿಕೆಯಲ್ಲಿ ಬಲಗೊಳ್ಳುತ್ತಿದ್ದಾರೆ.

ಕಾಂಗೋ ಕಿನ್ಶಾಸಾದ ಅಮೀರ್ ಸಾಹೇಬ್ ಅವರು ಬರೆಯುತ್ತಾರೆ: ಖುತ್‌ಬ ಜುಮುಅದ ಸಂದರ್ಭದಲ್ಲಿ ವಖ್ಫೇ ಜದೀದ್ ಬಗ್ಗೆ ಹೇಲಲಾಯಿತು. ಅದೇ ದಿನ ಪೋಲೀಸ್ ಉದ್ಯೋಗದಲ್ಲಿರುವ ಪ್ರಾಮಾಣಿಕ ಅಹ್ಮದಿ ನೂರುದ್ದೀನ್ ಸಾಹಿಬ್ ನಮ್ಮ ಮುಅಲ್ಲಿಮ್ ಸಾಹಿಬ್ ಅವರಿಗೆ ಕರೆ ಮಾಡಿ ನನ್ನ ಅಗತ್ಯಕ್ಕಾಗಿ ಸ್ವಲ್ಪ ಸಮಯದಿಂದ ಸ್ವಲ್ಪ ಹಣವನ್ನು ಸಂಗ್ರಹಿಸುತ್ತಿದ್ದೆ, ಆದರೆ ಇಂದು ಖುತ್‌ಬ ಜುಮುಅದಲ್ಲಿ ಮುರಬ್ಬಿ ಸಾಹಿಬ್ ಅವರು ಚಂದ ವಖ್ಫೇ ಜದೀದ್ ಬಗ್ಗೆ ನಮ್ಮ ಗಮನ ಸೆಳೆದರು ಆದ್ದರಿಂದ ಈ ಹಣವನ್ನು ಚಂದದಲ್ಲಿ ಇರಿಸಿಕೊಳ್ಳಿ. ಮತ್ತು ಚಂದಾ ವಖ್ಫೇ ಜದೀದ್‌ನಲ್ಲಿ ಎರಡು ಲಕ್ಷದ ಹತ್ತು ಸಾವಿರ ಫ್ರಾಂಕ್‌ಗಳನ್ನು ಪಾವತಿಸಿದರು, ಇದು ಅವರಿಗೆ ಅಸಾಮಾನ್ಯ ತ್ಯಾಗವಾಗಿತ್ತು. ಹಾಗಾಗಿ ಪ್ರೇಮಿಯೊಬ್ಬ ತನ್ನ ಸಂಪತ್ತನ್ನು ಅಲ್ಲಾಹನ ಮಾರ್ಗದಲ್ಲಿ ವಿನಿಯೋಗಿಸುವ ಉದಾಹರಣೆ ಇದಾಗಿದೆ.

ಮೆಸಿಡೋನಿಯದ ಮುಬಲ್ಲಿಗ್ ಸಾಹೇಬರು ಬರೆಯುತ್ತಾರೆ: ಇಲ್ಲಿರುವ ಬಹುಪಾಲು ಅಹ್ಮದಿಗಳು ತುಂಬಾ ಬಡವರಾಗಿದ್ದಾರೆ. ಆದರೂ ಅವರು ಆರ್ಥಿಕ ತ್ಯಾಗಗಳಲ್ಲಿ ಭಾಗವಹಿಸುತ್ತಾರೆ. ಓರ್ವ ಅಹ್ಮದಿ ಸ್ನೇಹಿತ ಫೈಸಲ್ ಸಾಹಿಬ್ ಇದ್ದಾರೆ ಅವರು 1995 ರಲ್ಲಿ ಜರ್ಮನಿಯಲ್ಲಿ ಬೈಅತ್ ಮಾಡಿದರು. ವಿವಿಧ ದೇಶಗಳಲ್ಲಿ ವಾಸಿಸಿದ್ದಾರೆ. ನಂತರ ಮ್ಯಾಸಿಡೋನಿಯಾಗೆ ಮರಳಿದರು. ಪ್ರಾರಂಭದಲ್ಲಿ ಜಮಾಅತ್ ಜೊತೆ ಕಡಿಮೆ ಸಂಪರ್ಕ ಹೊಂದಿದ್ದ ಅವರು ನಂತರ ಅವರ ಸಂಪರ್ಕಕ್ಕೆ ಬಂದರು. ಕಳೆದ ಈದ್–ಉಲ್–ಅದ್‌ಹಾದ ಸಂದರ್ಭದಲ್ಲಿ, ಅವರು ಎರಡು ಅಥವಾ ಮೂರು ದಿನಗಳ ಕಾಲ ಮಿಷನ್‌ನಲ್ಲಿ ಇದ್ದರು. ಈ ವೇಳೆ ಅವರಿಗೆ ಜಮಾಅತ್ ನ ಆರ್ಥಿಕ ವ್ಯವಸ್ಥೆಯ ಬಗ್ಗೆ ಮಾಹಿತಿ ನೀಡಲಾಯಿತು. ಕಡ್ಡಾಯ ಚಂದಗಳ ಜೊತೆಗೆ, ಇತರ ಆರ್ಥಿಕ ತ್ಯಾಗಗಳು, ತೆಹ್ರೀಕ್–ಎ–ಜದೀದ್ ಮತ್ತು ವಖ್ಫೇ ಜದೀದ್ ಬಗ್ಗೆ ತಿಳಿಸಲಾಯಿತು. ಹತ್ತು ಹನ್ನೆರಡು ದಿನಗಳ ನಂತರ ನಾನು ಅವರನ್ನು ಭೇಟಿಯಾಗಲು ನಗರಕ್ಕೆ ಹೋದೆ ಮತ್ತು ಹಿಂದಿರುಗಿದ ನಂತರ ಅವರು ನನಗೆ ಹತ್ತು ಸಾವಿರ ದಿನಾರ್ಗಳನ್ನು ಚಂದಗಾಗಿ ನೀಡಿದರು. ಅಂದರೆ ಅದು ಸುಮಾರು ಅರವತ್ಮೂರು ಯುರೋಗಳು ಎಂದು ಹೇಳಲಾಗುತ್ತದೆ. ಈ ಸ್ನೇಹಿತರು ನಿರುದ್ಯೋಗಿಗಳು. ದೀರ್ಘಕಾಲ ಕೆಲಸ ಮಾಡುತ್ತಿರಲಿಲ್ಲ. ಅದಕ್ಕೆ ನಾನು ಅವರಿಗೆ ಹೇಳಿದೆ ನಿಮ್ಮ ಪರಿಸ್ಥಿತಿ ನಿಮಗೆ ತಿಳಿದಿದೆ ನಿಮ್ಮ ಪರಿಸ್ಥಿತಿಗೆ ಅನುಗುಣವಾಗಿ ನೀವೇ ಏನನ್ನಾದರೂ ಇಟ್ಟುಕೊಳ್ಳಬೇಕು ಮತ್ತು ಅದನ್ನು ಕುಟುಂಬಕ್ಕೆ ಖರ್ಚು ಮಾಡಬೇಕು ಏಕೆಂದರೆ ಅದು ಮ್ಯಾಸಿಡೋನಿಯಾದ ಪರಿಸ್ಥಿತಿಗೆ ಅನುಗುಣವಾಗಿ ಸಾಕಷ್ಟು ದೊಡ್ಡ ಮೊತ್ತವಾಗಿದೆ. ಸರ್ವಶಕ್ತನಾದ ಅಲ್ಲಾಹನು ಅವರಿಗೆ ಏನನ್ನಾದರು ವ್ಯವಸ್ಥೆ ಮಾಡುವನು ಎಂದು ಹೇಳಿ ಬಹಳ ಸಂತೋಷದಿಂದ ಈ ಮೊತ್ತವನ್ನು ತಮ್ಮ ಹಾಗೂ ತಮ್ಮ ಕುಟುಂಬದ ಕಡೆಯಿಂದ ವಖ್ಫೆ ಜದೀದ್‌ನಲ್ಲಿ ಪಾವತಿಸಿದರು.

ಇವರೆಲ್ಲ ಆಗಿರುವರು ತ್ಯಾಗಶಾಲಿಗಳು. ಹಣದ ಆವಶ್ಯಕತೆಯಿದ್ದೂ ಅಲ್ಲಾಹನ ಮಾರ್ಗದಲ್ಲಿ ಖರ್ಚು ಮಾಡುವವರು.

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಸಂಪತ್ತನ್ನೂ ಅಲ್ಲಾಹನನ್ನೂ ಪ್ರೀತಿಸುವುದು ನಿಮಗೆ ಸಾಧ್ಯವಲ್ಲ. ಕೇವಲ ಒಂದನ್ನು ಪ್ರೀತಿಸಬಹುದು. ಅಲ್ಲಾಹನನ್ನು ಪ್ರೀತಿಸುವವನು ಸೌಭಾಗ್ಯಶಾಲಿ. ಯಾರು ಅಲ್ಲಾಹನನ್ನು ಪ್ರೀತಿಸಿಕೊಂಡು ಸಂಪತ್ತನ್ನು ಖರ್ಚು ಮಾಡುತ್ತಾನೋ ಅವನ ಸಂಪತ್ತಿನಲ್ಲಿ ಇತರರಿಗೆ ಹೋಲಿಸಿ ಹೆಚ್ಚು ಅನುಗ್ರಹವಿರುವುದು. ಏಕೆಂದರೆ ಸಂಪತ್ತು ಸ್ವತಃ ಬರುವುದಿಲ್ಲ. ಅಲ್ಲಾಹನ ಇಚ್ಛೆ ಪ್ರಕಾರ ಬರುತ್ತದೆ. ಯಾರು ಅಲ್ಲಾಹನಿಗಾಗಿ ಸಂಪತ್ತಿನಿಂದ ಕೆಲವು ಪಾಲನ್ನು ತ್ಯಾಗ ಮಾಡುತ್ತಾನೋ ಅವನು ಅದನ್ನು ಖಂಡಿತ ಗಳಿಸುವನು.

(ಮಜ್‌ಮೂಅ ಇಶ್ತಿಹರಾತ್, ಸಂಪುಟ–3, ಪುಟ–323, ನಝಾರತ್ ನಶ್ರೊ ಇಶಾಅತ್ ಖಾದಿಯಾನ್ 2019)

ಆದ್ದರಿಂದ ತ್ಯಾಗ ಮಾಡುವ ಪ್ರತಿಯೊಬ್ಬ ಅಹ್ಮದಿಯು ಸಂಪತ್ತು ಸರ್ವಶಕ್ತನಾದ ಅಲ್ಲಾಹನ ಕಡೆಯಿಂದ ಬರುತ್ತದೆ ಎಂಬ ಸತ್ಯಕ್ಕೆ ಸಾಕ್ಷಿಯಾಗಿದ್ದಾನೆ. ಹಝ್ರತ್ ಮಸೀಹ್ ಮೌಊದ್(ಅ) ನುಟಿದಿದ್ದು ಸತ್ಯವಾಗಿದೆ. ಉತ್ತಮ ಮಟ್ಟದಲ್ಲಿ ತ್ಯಾಗಮಾಡುವವರ ಮಟ್ಟವನ್ನು ಇನ್ನೂ ವರ್ಧಿಸಲು ಅಲ್ಲಾಹನು ಸೌಭಾಗ್ಯ ನೀಡಲಿ. ಆದರೆ ತ್ಯಾಗದ ಉನ್ನತ ಮಟ್ಟದಲ್ಲಿ ಇಲ್ಲದವರು ಹಝ್ರತ್ ಮಸೀಹ್ ಮೌಊದ್(ಅ)ರ ಒಂದು ಮಾತನ್ನು ಅರಿಯುವಂತಾಗಲಿ. ಅಲ್ಲಾಹನಿಗೆ ನಿಮ್ಮ ಸೇವೆಗಳ ಕಿಂಚಿತ್ತೂ ಆವಶ್ಯಕತೆಯಿಲ್ಲ, ನಿಮಗೆ ಸೇವೆಯ ಸಂದರ್ಭ ನೀಡುತ್ತಿದ್ದಾನೆ ಎಂಬುದು ಅಲ್ಲಾಹನ ಕೃಪೆಯಾಗಿದೆ ಎಂದು ಅವರು ಹೇಳಿದ್ದರು. (ಮಜ್ಮೂಅ ಇಶ್ತಿಹಾರಾತ್, ಸಂಪುಟ–3, ಪುಟ–324, ನಝಾರತ್ ನಶ್ರೊ ಇಶಾಅತ್ ಖಾದಿಯಾನ್ 2019) ಜಿಪುಣತನವನ್ನು ತೋರಿಸುವವರು ಇದರ ಬಗ್ಗೆ ಚಿಂತಿಸಬೇಕು. ಜಮಾಅತ್‌ನ ಶ್ರೀಮಂತರು ಇದನ್ನು ಅರ್ಥಮಾಡಿಕೊಳ್ಳಲು ಅಲ್ಲಾಹನು ಅನುಗ್ರಹಿಸಲಿ.

ಈಗ, ನಾನು ಕಳೆದ ವರ್ಷದ ಚಂದ ವಖ್ಫೇ ಜದೀದ್‌ನ ಅಂಕಿಅಂಶಗಳನ್ನು ವಿವರಿಸುತ್ತೇನೆ. ಸರ್ವಶಕ್ತನಾದ ಅಲ್ಲಾಹನ ಅನುಗ್ರಹದಿಂದ ಅರವತ್ತೈದನೇ ವರ್ಷದ ವಖ್ಫೇ ಜದೀದ್ ಡಿಸೆಂಬರ್ 31ಕ್ಕೆ ಮುಗಿದು ಜನವರಿ 1ರಿಂದ ಹೊಸ ವರ್ಷ ಶುರುವಾಗಿದೆ. 12.2 ಮಿಲಿಯನ್ ಅಂದರೆ ಒಂದು ಕೋಟಿ ಇಪ್ಪತ್ತೆರಡು ಲಕ್ಷ ಹದಿನೈರು ಸಾವಿರ ಪೌಂಡ್ (1,22,15,000) ತ್ಯಾಗವನ್ನು ಅರ್ಪಿಸಲಾಯಿತು. ಪ್ರಪಂಚದ ಆರ್ಥಿಕ ಪರಿಸ್ಥಿತಿಗಳು ಸುಧಾರಿಸದಿದ್ದರೂ, ಈ ತ್ಯಾಗವು ಕಳೆದ ವರ್ಷಕ್ಕಿಂತ ಒಂಬೈನೂರ ಇಪ್ಪತ್ತೆಂಟು ಸಾವಿರ (9,28,000) ಪೌಂಡ್‌ಗಳು ಹೆಚ್ಚು ಆಗಿದೆ. ಅಲ್ಹಮ್ದುಲಿಲ್ಲಾಹ್

ಬ್ರಿಟನ್ ಈ ವರ್ಷವೂ ಲೋಕದ ಜಮಾಅತುಗಳಲ್ಲಿ ವಸೂಲಿಯ ಪ್ರಕಾರ ಮೊದಲ ಸ್ಥಾನದಲ್ಲಿದೆ. ಅನಂತರ ಅನುಕ್ರಮವಾಗಿ ಹೀಗಿದೆ: ಕೆನಡ, ಜರ್ಮನಿ, ಅಮೇರಿಕ, ಭಾರತ, ಆಸ್ಟ್ರೇಲಿಯ, ಮಿಡಲ್ ಈಸ್ಟಿನ ಒಂದು ಜಮಾಅತ್, ಇಂಡೋನೇಶಿಯ, ಮಿಡಲ್ ಈಸ್ಟಿನ ಮತ್ತೊಂದು ಜಮಾಅತ್ ಹಾಗೂ ಬೆಲ್ಜಿಯಂ.

ತಲಾ ಪಾವತಿಯ ಪ್ರಕಾರ ದೇಶಗಳು ಅನುಕ್ರಮವಾಗಿ ಹೀಗಿದೆ: ಅಮೇರಿಕ, ಸ್ವಿಟ್‌ಝರ್‌ಲ್ಯಾಂಡ್, ಬ್ರಿಟನ್, ಆಸ್ಟ್ರೇಲಿಯ, ಕೆನಡ.

ಆಫ್ರಿಕದಲ್ಲಿ ಒಟ್ಟು ವಸೂಲಿನ ಪ್ರಕಾರ ಮೊದಲ ಹತ್ತು ಜಮಾಅತುಗಳು ಅನುಕ್ರಮವಾಗಿ ಹೀಗಿದೆ: ಘಾನ, ಮಾರೀಶಿಯಶ್, ನೈಜೀರಿಯ, ಬುರ್ಕಿನೋಫಾಸೋ, ತನ್ಸಾನಿಯ, ಲೈಬೀರಿಯ, ಗೇಂಬೀಯ, ಯುಗಾಂಡ, ಸೇರಲಿಯೋನ್ ಮತ್ತು ಬೆನಿನ್.

ಈ ವರ್ಷ ಹೊಸದಾಗಿ ಸೇರ್ಪಡೆಯಾದವರಲ್ಲಿ 61 ಸಾವಿರ ನಿಷ್ಠಾವಂತರ ವರ್ಧನೆ ಉಂಟಾಗಿದೆ. ಒಟ್ಟು ಸಂಖ್ಯೆ 15 ಲಕ್ಷ 6 ಸಾವಿರ ಆಗಿದೆ. ಸೇರ್ಪಡೆಯಾದವರಲ್ಲಿ ಉತ್ತಮವಾಗಿ ಕಾರ್ಯನಿರ್ವಹಿಸಿದವರಲ್ಲಿ ಯುಗಾಂಡ ಪ್ರಥಮ ಸ್ಥಾನದಲ್ಲಿದೆ, ಗಿನೀ ಬಸಾವ್, ಕೆಮರೂನ್, ಕಾಂಗೋ ಬ್ರಝಾವಿಲ್, ಮತ್ತೆ ನೈಜರ್, ಕಾಂಗೋ ಕಂಶಾಸಾ ಮತ್ತು ಕೋನೇಯದಾಗಿ ಬಾಂಗ್ಲಾದೇಶವಾಗಿದೆ.

